
# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ - 2016




## ಸಿನಿಮಾ ವಿಶೇಷ



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 33
ಸಂಚಿಕೆ - 4
ಜನವರಿ - 2016

## *ಈ ಸಂಚಿಕೆಯಲ್ಲಿ .....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಅವಿಸ್ಮರಣೀಯ.... | **ಕುಂವೀ** | 7 |
| ಮಾರುಕಟ್ಟೆಗೆ ತಕ್ಕ ಬೆಳೆ | **ಜೋಗಿ** | 10 |
| ಅಜ್ಜಿಗೆ ಫಿಲ್ಮೀ ಕಲ್ಚರ್.... | **ಇ.ಆರ್. ರಾಮಚಂದ್ರನ್** | 12 |
| ಏಕ್‌ಟೇಕ್ ಬಹುತ್.... | **ಬಾಲಕೃಷ್ಣ ಹೊಸಂಗಡಿ** | 16 |
| ಸಿನಿ ಕ್ವಿಜ್ | **ಆನಂದ** | 19 |
| ಮೇಕು... ರೀಮೇಕು... | **ವಿಶಾಖ ಎನ್.** | 22 |
| ಚಿತ್ರ ವಿಮರ್ಶೆ | **ಸಿ.ಆರ್. ಸತ್ಯ** | 25 |
| ಸಿನಿಮಾ ಎಂಬ ಮೋಹ.. | **ಚಿತ್ರಾ ರಾಮಚಂದ್ರನ್** | 29 |
| ಸಿನಿ ಹನಿ | **ಎಚ್. ಡುಂಡಿರಾಜ್** | 37 |
| ಎರಡೆರಡು ಚಂದ್ರನ ಕತೆ | **ಎಂ.ಕೆ. ಭಾಸ್ಕರ ರಾವ್** | 38 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

**ಸಿನಿಮಾ ವಿಶೇಷ ಲೋಗೋ: ರವೀಂದ್ರ ರಾವ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಐವತ್ತರ ಹರೆಯದ ಕಿಂಗ್ ಖಾನ್

● *ಅವರಿಗೆ ಅಪರಂಜಿಯ ಶುಭಾಶಯಗಳು !!*

★★★

'ಕಾಮೆಡಿ ವಿತ್ ರಾಹುಲ್ ಬಾಬಾ' ಎಂಬ ಚಿತ್ರಕ್ಕೆ ಡೈರೆಕ್ಟರ್ ಹುಡುಕುತ್ತಿದ್ದಾರಂತೆ !!

★★★

'ಜೇಮ್ಸ್ ಬಾಂಡ್ ಪಾತ್ರಕ್ಕೆ ಶಾನ್ ಕಾರ್ನೆ ಅವರೇ ಅತ್ಯುತ್ತಮ' ಅಂತ ಅಪರಂಜಿ ಕಾಮೆಂಟಿದಳಂತೆ !!

★★★

ಲೋಕಸಭೆಯ 'ಕಾರ್ಯ – ಕಲಹ' ಎಂದು ಒಂದು ಟಿ.ವಿ ಸೀರಿಯಲ್ ಏಕೆ ಶುರು ಮಾಡಬಾರದು !!

★★★

'ಆಂಸೂ ಭರೀ ಹೈ' ಎಂಬ ಹಾಡನ್ನು ಪಾರ್ಲಿಮೆಂಟ್ ಸದನದಲ್ಲಿ ಏಕೆ ಹಾಕಬಾರದು ?!

★★★

ಆಧುನಿಕ ಮಹಾಭಾರತ ಚಲನಚಿತ್ರ ಮಾಡಿದರೆ, ಸೋನಿಯಾಗೆ ಯಾವ ಪಾತ್ರ ?

● *'ಆಫ್ ಕೋರ್ಸ್' ಗಾಂಧಾರಿ !!*

★★★

ಉಪೇಂದ್ರ – ಯಡಿಯೂರಪ್ಪ ಅವರ ಇಂಟರ್‌ವ್ಯೂ ನೀವೆಲ್ಲ ಖಂಡಿತ ನೋಡಬೇಕು !!

★★★

ನಮ್ಮ ಜೀವನದುದ್ದಕ್ಕೂ ನಮ್ಮನ್ನು ನಗಿಸುತ್ತಾ ಬಂದಿರುವ
ಹಾಸ್ಯ ನಟ ನಟಿಯರಿಗೆಲ್ಲ ಅಪರಂಜಿಯ
ಹೃದಯಪೂರ್ವಕ ವಂದನೆಗಳು.


★★★

# ನಮ್ಮ ನಿಮ್ಮಲ್ಲಿ

ಸಿನಿಮಾ ವಿಶೇಷ

**ಈ** ತಿಂಗಳ ಸಂಚಿಕೆ ಸಿನಿಮಾ ಥೀಮ್‌ಗೆ ಮೀಸಲು. ''ಸಿನಿಮಾ'' ಎಂಬ ಒಂದು ಪದದ ಆಸುಪಾಸಿನಲ್ಲಿ ತೆರೆದುಕೊಳ್ಳುವ ಚಿಂತನೆಗಳ ವೈವಿಧ್ಯತೆ ಬೆರಗುಗೊಳಿಸುವಂತಹದು. ಮನರಂಜನೆ, ಸೃಜನಶೀಲತೆ, ಕಲೆ, ವಿಜ್ಞಾನ, ಪ್ರಣಯ, ಹಾಸ್ಯ, ಕೌತುಕವೇ ಮೊದಲಾಗಿ ಹತ್ತು ಹಲವಾರು ಆಯಾಮಗಳಲ್ಲಿ ಸಿನಿಮಾ ಹರಡಿಕೊಂಡಿರುವುದು ಎಲ್ಲರಿಗೂ ತಿಳಿದಿರುವ ವಿಷಯವೇ.

ನಾನು ನೋಡಿದ ಮೊದಲ ಸಿನಿಮಾ ಅಂದರೆ ಒಂದು ವಾಲ್ಟ್ ಡಿಸ್ನೆ ಕಾರ್ಟೂನ್ ಕಲರ್ ಮೂವಿ. ಆಗ ನನಗೆ ನಾಲ್ಕು ವರ್ಷ ಇರಬಹುದು. ನಮ್ಮ ಪಕ್ಕದಮನೆಯ ಮಹದೇವರಾವ್ ಮತ್ತು ಕೃಷ್ಣಾಬಾಯಿ ದಂಪತಿಗಳು, ನನ್ನನ್ನು ಈ ಸಿನಿಮಾಗೆ ಕರೆದುಕೊಂಡು ಹೋಗಿದ್ದರು. ನಾನು ತುಂಟತನದಿಂದ ಯಾವ ಬದಿಗೂ ಓಡದಂತೆ ಅವರಿಬ್ಬರೂ ನನ್ನ ಎರಡೂ ಪಕ್ಕದಲ್ಲಿ ಕುಳಿತರು. ಥಿಯೇಟರ್ ಕತ್ತಲಾಗಿ ಸಿನಿಮಾ ಶುರು ಆಯಿತು. ಯಾವುದೋ ಹಕ್ಕಿಗಳು ಮರದ ಹಲಗೆಗಳನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಬಂದು ಪುಟ್ಟ ಹಕ್ಕಿ ಮನೆಯೊಂದನ್ನು ಕಟ್ಟುತ್ತಿದ್ದುದನ್ನು ನೋಡಿದ ನೆನಪು. ಅಷ್ಟರಲ್ಲಿ ನಾನು ಎಲ್ಲರಂತೆ ಹಿಂದಕ್ಕೆ ಒರಗಿ ಕೂರಲು ನಿಶ್ಚಯಿಸಿ ಹಿಂದಕ್ಕೆ ಸರಿದೆ. ಆಗಿನ ಕಾಲದಲ್ಲಿ ಸಿನಿಮಾ ಕುರ್ಚಿಗಳೆಲ್ಲಾ ಫೋಲ್ಡಿಂಗ್ ಸೀಟುಗಳು. ನನ್ನ ಪುಟ್ಟ ಭಾರವೆಲ್ಲಾ ಸೀಟಿನ ಹಿಂಭಾಗಕ್ಕೆ ಬಿದ್ದು, ಕುರ್ಚಿಯ ಸೀಟು ಹಿಂದಕ್ಕೆ ಮಡಚಿಕೊಂಡಿತು. ನಾನು ಬುಳಕ್ಕನೆ ಹಿಂದಿನ ಸಾಲಿನಲ್ಲಿ ಕೂತಿದ್ದ ವ್ಯಕ್ತಿಯೊಬ್ಬರ ಪಾದಗಳ ಮೇಲೆ ಉರುಳಿದ್ದೆ. ಆತ ಕರುಣಾಮಯಿ. ನನ್ನನ್ನು ಅನಾಮತ್ತು ಎತ್ತಿ ಸೀಟಿನ ಮೇಲಿಂದ ಕೃಷ್ಣಾಬಾಯಿಯವರಿಗೆ ರವಾನಿಸಿದ. ''ನೇನು ಚಪ್ಪಿ, ...'' ಅಂತ ಮಹದೇವರಾವ್ ತಮ್ಮ ಪತ್ನಿಯ ಮೇಲೆ ಹರಿಹಾಯ್ದರು. ಆಕೆ ಮರು ಮಾತನಾಡದೇ ನನ್ನನ್ನು ತಮ್ಮ ತೊಡೆಯ ಮೇಲೆ ಕೂರಿಸಿಕೊಂಡರು. ಆಗ ನನಗಾದ ನಾಚಿಕೆಯಲ್ಲಿ ಸಿನಿಮಾದ ಮಿಕ್ಕ ಭಾಗವನ್ನು ನೋಡಲಾಗಲೇ ಇಲ್ಲ ಅನ್ನಿ.



ಕೊರವಂಜಿ ಪ್ರಾರಂಭವಾದಾಗ ಅದಕ್ಕೆ ಗಾಂಧಿನಗರದ ಅನೇಕ ಸಿನಿಮಾ ವಿತರಕರು ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದರು. ಇದಕ್ಕೆ ಮುಖ್ಯ ಕಾರಣ ಗಾಂಧಿನಗರದ ಪಕ್ಕದ ಮೆಜೆಸ್ಟಿಕ್‌ನಲ್ಲೇ ನಮ್ಮ ತಂದೆ ತಮ್ಮ ಡಿಸ್ಪೆನ್ಸರಿ ನಡೆಸುತ್ತಿದ್ದು, ಈ ವಿತರಕರೆಲ್ಲಾ ಒಂದಲ್ಲಾ ಒಂದು ಬಾರಿ ಅವರ ಬಳಿಗೆ ರೋಗಿಗಳಾಗಿ ಬರುತ್ತಿದ್ದುದು. ಆಗಿನ ಕಾಲದ ಖ್ಯಾತ ಜನಪ್ರಿಯ ಚಿತ್ರಗಳಾದ ಆವಾರಾ, ಬೇಡರಕಣ್ಣಪ್ಪ, ಸದಾರಮೆ, ಚಂದ್ರಲೇಖ ಮುಂತಾದ ಅನೇಕ ಚಿತ್ರಗಳ ಜಾಹೀರಾತುಗಳು ಕೊರವಂಜಿಯ ಪುಟಗಳನ್ನು ಅಲಂಕರಿಸಿದ್ದವು. ಮೊನ್ನೆ ಗೆಳೆಯ ಶ್ರೀನಿವಾಸ ವೈದ್ಯ ಮನೆಗೆ ಬಂದು ಹಳೆಯ ಕೊರವಂಜಿ ಸಂಚಿಕೆಗಳನ್ನು ತಿರುವಿಹಾಕುತ್ತಿದ್ದಾಗ ಅವನ ಕಣ್ಣಿಗೆ ಬಿದ್ದ ಜವಾಬ್, ಅಚ್ಯುತ ಕನ್ಯಾ ಮತ್ತು ಸಿಕಂದರ್ ಚಿತ್ರಗಳ ಜಾಹೀರಾತುಗಳನ್ನು ನೋಡಿ ಭಾವಪರವಶನಾಗಿದ್ದು ನೆನಪಿಗೆ ಬರುತ್ತದೆ.

ಐವತ್ತರ ದಶಕದ ಸುಮಾರು. ನಾವೆಲ್ಲಾ ಆಗತಾನೇ ಇಂಟರ್ ಮುಗಿಸಿ ಕಾಲೇಜಿಗೆ ಪದಾರ್ಪಣೆ ಮಾಡಿದ್ದೆವು. ನಮ್ಮಲ್ಲಿ ಅರ್ಧಕ್ಕರ್ಧ ಹುಡುಗರು ಸಿನಿಮಾ ಗಿನಿಮಾ ಏನೂ ಅರೀದ ಹಸುಳೆಗಳು. ಪರಿಸ್ಥಿತಿ ಹೀಗಿದ್ದಾಗ ನಮ್ಮಂಥಾ ಕುಡುಮಿಗಳನ್ನೆಲ್ಲಾ ಕಂಟೋನ್‌ಮೆಂಟ್‌ಗೆ ಕರೆದುಕೊಂಡು ಹೋಗಿ ನಮಗೆಲ್ಲಾ ಹಾಲಿವುಡ್ ಚಿತ್ರಗಳನ್ನು ಪರಿಚಯಿಸಿದ ಕೀರ್ತಿ ಚೀದಿಗೆ ಸಲ್ಲಬೇಕು. ಚೀದಿಯ ಪೂರ್ಣ ನಾಮಧೇಯ ಶ್ರೀಧರ. ಅವನನ್ನು ಮನೇಲಿ ಚೀದಿ ಅಂತ ಕರೀತಾ ಇದ್ದಿದ್ರಿಂದ ನಾವೂ ಹಾಗೇ ಕರೀತಾ ಇದ್ವಿ. ಬಸವನಗುಡಿ ಸನ್ನಿಧಿ ರಸ್ತೆಯಲ್ಲಿ ಅವರ ಮನೆ. ಚೀದಿ ಬಲು ರಸಿಕ. ಕ್ರಾಪ್‌ನ ಮೇಲಕ್ಕೆ ತೀಡಿ ಬಾಚ್ಕೊಂಡು, ಟಿಪ್ ಟಾಪ್ ಆಗಿ ಡ್ರೆಸ್ ಮಾಡ್ಕೊಂಡು ಕ್ಲಾಸಿಗೆ ಬರ್ತಿದ್ದ ಅವನು. ಇಂಗ್ಲೀಷ್ ಪಿಕ್ಚರ್‌ಗಳನ್ನ ನೋಡದೇ ಇದ್ರೆ ಜೀವನ ನಿರರ್ಥಕ ಅಂತ ಸಿನಿಮಾನೇ ನೋಡದ ನಮಗೆಲ್ಲಾ ಕನ್ವಿನ್ಸ್ ಮಾಡಿ, ಡೆಬೋರಾ ಕಾರ್, ಅನಿಟಾ ಎಕ್‌ಬರ್ಗ್ ಇವರುಗಳ ಸನ್ನಿಧಿಗೆ ಕರೆದೊಯ್ದವನು, ಸನ್ನಿಧಿ ರಸ್ತೆಯ ಚೀದಿ.

ಅಬ್ಬ ಎಂಥ ಚಿತ್ರಗಳು ಬರೋವು ಆ ಕಾಲದಲ್ಲಿ ಅಂತ! ಉತ್ತಮ ನಟನೆಗೆ ಹೆಸರಾದ ಷಿರ್ಲೀ ಮೆಕ್ಲೀನ್, ಆಡ್ರೆ ಹೆಪ್‌ಬರ್ನ್ ಇವರುಗಳ ಅಭಿನಯ ಕೌಶಲ್ಯಕ್ಕೆ ಸರಿಸಾಟಿಯಾಗಿ ಗ್ರೆಗೊರಿ ಪೆಕ್, ಜಿಮ್ಮಿ ಸ್ಟೀವರ್ಟ್ ನಟಿಸ್ತಾ ಇದ್ರು. ಆ ದಿನಗಳಲ್ಲಿ ಚಿತ್ರಕಥೆಗಳೂ ಚೆನ್ನಾಗಿಯೇ ಇರ್ತಾ ಇದ್ವು ಅನ್ನಿ. ನೋಟಕನನ್ನು ಎಂಟು ವರ್ಷದ ಹೀಚಿನಂತೆ ಪರಿಗಣಿಸದೇ, ಅವನ ಬುದ್ಧಿಗೂ ಒಂದಿಷ್ಟು ಮರ್ಯಾದೆ ಕೊಟ್ಟು ಕಥೆ ಬರೀತಾ ಇದ್ರು ಆವಾಗ. ಬಿಲ್ಲೀ ವೈಲ್ಡರ್ ಆಗಿನ ಕಾಲದಲ್ಲಿ ಒಬ್ಬ ಖ್ಯಾತ ನಿರ್ದೇಶಕ. ಈತ, ತಾನು ನಿರ್ದೇಶಿಸುತ್ತಿದ್ದ ಚಿತ್ರಗಳಿಗೆ ತಾನೇ ಚಿತ್ರಕಥೆ ಸಂಭಾಷಣೆ ಎಲ್ಲಾ ಬರೀತಾ ಇದ್ದ. ''ಸಮ್ ಲೈಕ್ ಇಟ್ ಹಾಟ್'' ಅನ್ನೋ ಚಿತ್ರಾನ ಬಿಲ್ಲೀನೇ ನಿರ್ದೇಶಿಸಿದ್ದು. ಟೋನಿ ಕರ್ಟಿಸ್ ಮತ್ತು ಜಾಕ್ ಲೆಮೆನ್ ಎಂಬ ಇಬ್ಬರು ಹಾಸ್ಯನಟರು ಮ್ಯಾರಿಲಿನ್ ಮನ್ರೋಳೊಂದಿಗೆ (ಓಹ್ ಮ್ಯಾರಿಲಿನ್!) ಅಭಿನಯಿಸಿದ್ದ ಚಿತ್ರ ಇದು. ಚಿತ್ರದ ಕೊನೇ ಸೀನ್‌ನಲ್ಲಿ ಜೀವ ಉಳಿಸ್ಕೊಳ್ಳೋಕೆ ಅಂತ ಹೆಣ್ಣಿನ ಉಡುಪನ್ನು ಧರಿಸಿದ್ದ ಜಾಕ್ ಲೆಮನ್‌ನನ್ನು ಒಬ್ಬ



ಕೋಟ್ಯಾಧೀಶ ಮೋಹಿಸಿ, ತನ್ನನ್ನ ಮದುವೆಯಾಗು ಅಂತ ಬಲವಂತ ಮಾಡ್ತಾನೆ. ಜಾಕ್ ಏನೇ ಸಬೂಬು ಹೇಳಿದ್ರೂ ಆ ಕೋಟ್ಯಾಧೀಶ್ವರ ಕಿವಿಮೇಲೆ ಹಾಕ್ಕೊಳ್ಳೋದಿಲ್ಲ. ಕೊನೆಗೆ ಉಪಾಯವಿಲ್ಲದೇ ಜಾಕ್, ತನ್ನ ಟೋಫನನ್ನು ಕಿತ್ತು ಬಿಸಾಕಿ, ''ನೋಡು ನಾನು ಗಂಡಸು'' ಅಂತ ಘೋಷಿಸಿದಾಗ, ಆ ಕೋಟ್ಯಾಧೀಶ್ವರ ''ನೋಬಾಡಿ ಈಸ್ ಪರ್ಫೆಕ್ಟ್!'' ಅನ್ನೋವಾಗ ಚಿತ್ರ ಮುಗಿಯುತ್ತೆ.

ನನಗೆ ನೆನಪಿರುವ ಅತ್ಯುತ್ತಮ ಸಸ್ಪೆನ್ಸ್ ಚಿತ್ರ ಎಂದರೆ ''ಫೇಸ್ ಎ ಕ್ರೂಕೆಡ್ ಷಾಡೋ.'' ರಿಚರ್ಡ್ ಟಾಡ್ ಮತ್ತು ಆ್ಯನ್ ಬಾಕ್ಸ್ಟರ್ ನಟಿಸಿರುವ ಈ ಚಿತ್ರದ ಪ್ರಾರಂಭವೇ ಕೌತುಕಮಯ. ರಾತ್ರಿ ಹತ್ತೂವರೆ ಸಮಯ. ಬಾರ್ಸಿಲೋನಾದ ಒಂದು ಶ್ರೀಮಂತ ಸೌಧದಲ್ಲಿ ಸಂತೋಷ ಕೂಟವೊಂದು ಮುಗಿಯುವ ಹಂತದಲ್ಲಿದೆ. ಅತಿಥೇಯಿಣಿ ಆ್ಯನ್ ಬಂದಿದ್ದ ಅತಿಥಿಗಳನ್ನೆಲ್ಲಾ ಬೀಳ್ಕೊಟ್ಟು ಬಾಗಿಲು ಹಾಕಿಕೊಂಡು ಒಳಗೆ ಬಂದು ಡ್ರಾಯಿಂಗ್ ರೂಮಿನಲ್ಲಿ ಸುಸ್ತಾಗಿ ಕೂರುತ್ತಾಳೆ. ಅವಳೊಬ್ಬಳೇ ಆ ಮನೆಯಲ್ಲಿ ಒಂಟಿಯಾಗಿ ಕುಳಿತಿರುವಾಗ ಹಿಂಬಾಗಿಲ ಬಳಿ ಬೂಟುಗಾಲಿನ ಸಪ್ಪಳ ಕೇಳಿಬರುತ್ತದೆ. ಆ್ಯನ್ ಗಾಬರಿಯಿಂದ ತೆರೆದಿದ್ದ ಹಿಂಬಾಗಿಲಿನತ್ತ ಹೋಗಿ ನೋಡಿದಾಗ, ಒಬ್ಬ ಸ್ಫುರದ್ರೂಪಿ ಯುವಕ ಮೆಟ್ಟಲು ಹತ್ತಿ ಮನೆಯೊಳಕ್ಕೆ ಬರುತ್ತಿರುತ್ತಾನೆ. ''ಯಾರು ನೀನು?'' ಅಂತ ಆ್ಯನ್ ಗಾಬರಿಯಿಂದ ಚೀರಿದಾಗ, ಆತ ಸ್ವಲ್ಪವೂ ವಿಚಲಿತನಾಗದೇ, ''ನಾನು ನಿನ್ನ ತಮ್ಮ, ನೆನಪಿಲ್ಲವೇ ಅಕ್ಕಾ?'' ಎನ್ನುತ್ತಾನೆ. ಹೀಗೆ ಪ್ರಾರಂಭವಾಗುವ ಚಿತ್ರ ಮೊದಲಿನಿಂದಲೂ ಪ್ರೇಕ್ಷಕರ ಸಹಾನುಭೂತಿ ಆ್ಯನ್ ಕಡೆ ವಹಿಸುವಂತೆ ಮಾಡಿ ಆ ಯುವಕನನ್ನು (ರಿಚರ್ಡ್ ಟಾಡ್) ನೋಟಕರು ಸಂಶಯದಿಂದ ನೋಡುವಂತೆ ಮಾಡುವುದರಲ್ಲಿ ಸಫಲವಾಗುತ್ತದೆ. ಚಿತ್ರದ ಕೊನೆಯಲ್ಲಿ ತನ್ನ ತಮ್ಮನನ್ನು ತಾನೇ ಕೊಲೆ ಮಾಡಿದ್ದನ್ನು ಆ್ಯನ್ ಒಪ್ಪಿಕೊಳ್ಳಲೆಂದೇ ಪೋಲಿಸ್ ಅಧಿಕಾರಿಯೊಬ್ಬ ಈ ನಾಟಕವಾಡಿದ್ದನೆಂಬುದು ತಿಳಿದಾಗ ಚಿತ್ರದ ಸ್ವಾರಸ್ಯ ಇಮ್ಮಡಿಯಾಗುತ್ತದೆ.

ಒಂದು ಒಳ್ಳೆಯ ಚಲನಚಿತ್ರವೊಂದನ್ನು ನೋಡಿದಾಗ, ಒಂದು ಉತ್ತಮ ಕಾದಂಬರಿಯನ್ನು ಓದಿದಷ್ಟೇ ಸಂತಸ ಮೂಡುತ್ತದಂತೆ. ಜೀವನದ ಒಂದು ತುಣುಕನ್ನು ಕಲೆಗಾರಿಕೆಯಿಂದ ಬಿಂಬಿಸಿ, ಅದು ಪ್ರೇಕ್ಷಕನನ್ನು ತಲುಪುವಂತೆ ಮಾಡಬೇಕಾದರೆ ನಿರ್ದೇಶಕನಿಂದ ಮೊದಲುಗೊಂಡು ಅನೇಕ ಕಲೆಗಾರರು, ತಜ್ಞರು, ಛಾಯಾಗ್ರಾಹಕರು ಒಂದು ಟೀಮಿನಂತೆ ಒಬ್ಬರಿಗೊಬ್ಬರು ಕೈ ಜೋಡಿಸಿ ಕೆಲಸಮಾಡುವುದು ಅತ್ಯಗತ್ಯ. ಸಿನಿಮಾ ಮಾಡುವುದು ಹಾಗಿರಲಿ, ಸಿನಿಮಾ ನೋಡುವುದಕ್ಕೂ ಪರಿಶ್ರಮ ಇರಬೇಕಾಗುತ್ತದೆ. ಒಳ್ಳೆಯ ಸಿನಿಮಾವನ್ನು ಗುರುತಿಸಿ, ಆ ಚಿತ್ರದ ಪ್ರತಿಯೊಂದು

ಕಲೆಗಾರಿಕೆಯನ್ನೂ ಸೂಕ್ಷ್ಮವಾಗಿ ಆಸ್ವಾದಿಸಿ ಚಿತ್ರದ ಕೊನೆಯವರೆಗೂ ಆಸಕ್ತಿಯನ್ನು ಉಳಿಸಿಕೊಳ್ಳುವುದು ಅಸಲಿ ಚಿತ್ರಪ್ರೇಮಿಗಳಿಗೆ ಮಾತ್ರ ಸಾಧ್ಯ.

ಮೊನ್ನೆ ನಾನು ನೋಡಿದ ಒಂದು ಅತ್ಯಂತ ನಿಗೂಢ ಚಿತ್ರವೆಂದರೆ ''ದ ಗ್ರೌಂಡ್ ಹಾಗ್ ಡೇ.'' ಅಮೆರಿಕೆಯ ಒಂದು ಹಳ್ಳಿಯಲ್ಲಿ ಪ್ರತಿ ಚಳಿಗಾಲ ಫೆಬ್ರವರಿ ಎರಡರಂದು ನಡೆಯುವ ಸಮಾರಂಭ, ಗ್ರೌಂಡ್ ಹಾಗ್ ಡೇ. ಅಮೆರಿಕೆಯ ಪಿಟ್ಸ್‌ಬರ್ಗ್‌ನಲ್ಲಿನ ಹವಾಮಾನ ವರದಿಗಾರನೊಬ್ಬ ಈ ಹಳ್ಳಿಯ ಸಮಾರಂಭದ ಬಗ್ಗೆ ವರದಿ ಮಾಡಲು ಅಲ್ಲಿಗೆ ಹೋಗುತ್ತಾನೆ. ಫೆಬ್ರವರಿ ಎರಡರಂದು ನಡೆದ ಆ ಸಮಾರಂಭ ಮುಗಿದು, ಅಂದು ಮಧ್ಯಾಹ್ನ ಅವನು ತನ್ನ ಸಂಗಡಿಗರೊಂದಿಗೆ ಊರಿಗೆ ಹೊರಟಾಗ ಮಂಜು ಬೀಳಲು ಪ್ರಾರಂಭವಾಗಿ ರಸ್ತೆಗಳು ಮುಚ್ಚಿಹೋಗಿ, ಅವನು ಇನ್ನೂ ಒಂದು ರಾತ್ರಿ ಆ ಹಳ್ಳಿಯಲ್ಲೇ ಕಳೆಯಬೇಕಾಗುತ್ತದೆ. ಮಾರನೆಯ ಬೆಳಗ್ಗೆ ಅಲಾರಮ್ ಹೊಡೆದಾಗ ಆತ ಎದ್ದು ಬೀದಿಗೆ ಬಂದರೆ ಪುನಃ ಎಲ್ಲರೂ ಸಮಾರಂಭಕ್ಕೆ ಹೊರಟಿರುತ್ತಾರೆ. ಪಕ್ಕದವರನ್ನು ವಿಚಾರಿಸಿದರೆ ಅವತ್ತು ಫೆಬ್ರವರಿ ಎರಡು ಎಂದು ಅವರು ಹೇಳುತ್ತಾರೆ. ಯಾವುದೋ ಒಂದು ಕೌತುಕದಿಂದ ಆತ ಆ ದಿನದಲ್ಲೇ ನಿರಂತರವಾಗಿ ಸಿಕ್ಕಿಕೊಂಡುಬಿಟ್ಟಿರುತ್ತಾನೆ. ಸಂಗಡಿಗರು ಯಾರಿಗೂ ಇವನ ಬವಣೆ ತಿಳಿಯುವುದೇ ಇಲ್ಲ. ಒಂದೇ ದಿನ ಮತ್ತು ಅಂದಿನ ಘಟನೆಗಳನ್ನೇ ಮತ್ತೆ ಮತ್ತೆ ಅನುಭವಿಸಿ ತಲೆ ಚಿಟ್ಟು ಹಿಡಿದು, ರೋಸಿ ಹೋಗಿ ಆತ್ಮಹತ್ಯೆ ಮಾಡಿಕೊಂಡರೂ ಮಾರನೆಯ ಬೆಳಗ್ಗೆ ಅದೇ ಅಲಾರಮ್, ಅದೇ ಘಟನೆಗಳು. ಕೊನೆಗೆ ಬೇರೇನೂ ತೋಚದೆ, ಸುತ್ತಮುತ್ತಲಿನವರಿಗೆ ಸಹಾಯ ಮಾಡುವ ಸಜ್ಜನ ನಡವಳಿಕೆಯನ್ನು ಅನುಸರಿಸತೊಡಗಿದಾಗ, ಅವನು ಈ ಚಿರಂಜೀವಿತ್ವದಿಂದ ಬಿಡುಗಡೆ ಹೊಂದಿ ಫೆಬ್ರವರಿ ಮೂರರ ಬೆಳಗನ್ನು ಕಾಣುತ್ತಾನೆ. ಸಾತ್ವಿಕ ಜೀವನಶೈಲಿಯ ಮೂಲಕ, ಜನ್ಮ ಜನ್ಮಾಂತರಗಳ ಬಂಧನಗಳಿಂದ ಬಿಡುಗಡೆ ಹೊಂದುವ ಅದ್ವೈತ ದರ್ಶನದ ಸಿದ್ಧಾಂತಕ್ಕೆ ಇದೊಂದು ಸೊಗಸಾದ ಉಪಮೆ ಅನ್ನಿಸಿತು.

ಈ ಸಂಚಿಕೆಯಲ್ಲಿ, ಸಿನಿಮಾದ ವಿವಿಧ ಆಯಾಮಗಳ ಬಗ್ಗೆ ನಮ್ಮ ಬರಹಗಾರರು ಲೇಖನಗಳನ್ನು ರಚಿಸಿ ನಿಮ್ಮ ಮುಂದೆ ಇಟ್ಟಿದ್ದಾರೆ. ಓದಿ, ಆನಂದಿಸಿ.

**ಶಿವಕುಮಾರ್**

---

### ಹೇಗೆ ಬರೆಯಲಿ?

ಮುನ್ನಾಭಾಯ್ : ಅರೆ, ಸರ್ಕ್ಯೂಟ್, ನನಗೆ ಒಬ್ಬ ನರ್ಸ್ ಮೇಲೆ ಪ್ರೀತಿ ಆಗಿದೆ. ಅವಳಿಗೆ ಹೇಗೆ ಕಾಗದ ಬರೆಯಲಿ?

ಸರ್ಕ್ಯೂಟ್ : ಸುಲಭ ಭಾಯ್, ಮೈ ಡಿಯರ್ ಸಿಸ್ಟರ್, ಐ ಲವ್ ಯು.. ಅಂತ ಶುರು ಮಾಡು.

ಸಿನಿಮಾ ವಿಶೇಷ

# ಅವಿಸ್ಮರಣೀಯ ಅನುಭವ ನೀಡುವ – 'ಸಿಟಿ ಲೈಟ್ಸ್'

**– ಕುಂವೀ**

**ಸ**ಲೀಸಾಗಿ ಕಾದಂಬರಿ ಓದುವುದೆಂದರೆ ಸಿನೆಮಾ ನೋಡುವುದು. ಆರನೆಯ ತರಗತಿಯಿಂದ ಆರಂಭಿಸಿ ಇಂದಿನವರೆಗೆ ನಾನು ಏನಿಲ್ಲವೆಂದರೂ ಸಹಸ್ರಾರು ಸಿನೆಮಾಗಳನ್ನು ನೋಡಿರಬಹುದು. ಇವತ್ತಿಗೂ ನಾನು ದಿನಕ್ಕೊಂದಾದರೂ ಸಿನೆಮಾ ನೋಡುತ್ತೇನೆ. ತಿಂಡಿ ಊಟದ ಸಮಯದಲ್ಲಿ ನೋಡುವ ತಿನ್ನುವ ಕ್ರಿಯೆಗಳು ಪರಸ್ಪರ ಪೂರಕವಾಗಿ ನಡೆಯುತ್ತವೆ. ಅವು ಅರ್ಥವಾಗುವ ಅಥವಾ ಅರ್ಥವಾಗದ ಯಾವುದಾದರೂ ಸಿನೆಮಾ ಆಗಿರಬಹುದು. ಅಂದರೆ ದೃಶ್ಯ ಮಾಧ್ಯಮ ಭಾಷಾತೀತವಾದುದು. ನನ್ನ ಎರಡು ಹಾರ್ಡ್ ಡ್ರೈವ್‌ಗಳಲ್ಲಿ ಒಂದು ಸಾವಿರಕ್ಕೂ ಅಧಿಕ ಸಂಖ್ಯೆಯ ಚಿತ್ರಗಳಿವೆ. ಪ್ರಾದೇಶಿಕ ಭಾಷೆಗಳಿಗಿಂತ ಮುಖ್ಯವಾಗಿ ಕೊರಿಯಾ, ಜಪಾನ್, ಚೀನಾ, ಆಫ್ಘಾನಿಸ್ತಾನ, ಇರಾನಿ ಸೇರಿದಂತೆ ಜಗತ್ತಿನ ನೂರಾರು ಭಾಷೆಗಳ ಚಿತ್ರಗಳಿವೆ. ಸಿನೆಮಾ ನೋಡುಗನಲ್ಲಿ ಇಮ್ಯಾಜಿನೇಷನ್, ಅಬ್ಸರ್ವೇಷನ್ ಮತ್ತು ಕಲ್ಟಿವೇಷನ್ ಶಕ್ತಿಯನ್ನು ಉದ್ದೀಪಿಸುತ್ತದೆ. ಅಲ್ಲದೆ ಮನುಷ್ಯನ ಜೀವನವನ್ನು ಚೇತೋಹಾರಿಯಾಗಿರಿಸುತ್ತದೆ. ಆದ್ದರಿಂದ ಸಿನೆಮಾ ನೋಡುವುದು ನನ್ನ ಪ್ರಮುಖ ಹವ್ಯಾಸ. ಮೂನ್ರಾಂ ಪಿರೈ ನಿರ್ದೇಶಕ ಬಾಲುಮಹೇಂದ್ರ, ತಣ್ಣೀರ್ ತಣ್ಣೀರ್, ಆಕಲಿರಾಜ್ಯಗಳಂಥ ಚಿತ್ರಗಳ ನಿರ್ದೇಶಕ ಬಾಲಚಂದರ್, ಇರುವರ್, ನಾಯಗನ್ ಚಿತ್ರಗಳ ನಿರ್ದೇಶಕ ಮಣಿರತ್ನಂ, ಸತ್ಯ, ಸರ್ಕಾರ್, ಕಂಪನಿ ಚಿತ್ರಗಳ ನಿರ್ದೇಶಕ ರಾಮಗೋಪಾಲ್‌ವರ್ಮ ಇಂಥವರ ಅಭಿಮಾನಿ ನಾನು. ಇನ್ನು ಚಾರ್ಲಿ ಚಾಪ್ಲಿನ್‌ನಂತೂ ನನ್ನ ಆರಾಧ್ಯದೈವ. ಆ ಮಹಾನ್ ಮಾನವತಾವಾದಿ ಅಭಿನಯಿಸಿರುವ ಎಪ್ಪತ್ತೆಂಟು ಚಿತ್ರಗಳನ್ನು ಸಾವಿರಾರು ಸಲ ನೋಡಿರಬಹುದು. ಅವರ ಚಿತ್ರಗಳ ಪ್ರಭಾವದಿಂದಾಗಿ ಅವರ ಕುರಿತಂತೆ ಪ್ರಕಟವಾಗಿರುವ ನೂರಾರು ಕೃತಿಗಳನ್ನು ಓದಿ ಅರಗಿಸಿಕೊಂಡಿರುವೆ. ಆ ಓದಿನ ಪ್ರಭಾವದಿಂದಾಗಿ ಚಾಪ್ಲಿನ್ ಎಂಬ ಶೀರ್ಷಿಕೆಯ ಸುಮಾರು 450 ಪುಟಗಳ ಗಾತ್ರದ ಕೃತಿಯನ್ನು ಹದಿನೈದು ವರ್ಷಗಳ ಹಿಂದೆಯೇ ರಚಿಸಿದೆ. ಅದರಲ್ಲಿ ಚಾಪ್ಲಿನ್ ಕುರಿತು ಮಾತ್ರವಲ್ಲದೆ ಹಾಲಿವುಡ್ ಜಗತ್ತಿನ ಸಮಗ್ರ ಪರಿಚಯ ಅದರಲ್ಲಿದೆ. ಈಗ ಇಂಟರ್‌ನೆಟ್‌ನಲ್ಲಿ ಅತ್ಯುತ್ತಮ ಚಿತ್ರಗಳು ದೊರಕುತ್ತವೆ. ಹತ್ತಿಪ್ಪತ್ತು ವರ್ಷಗಳ ಹಿಂದೆ ಅವುಗಳಿರುವಲ್ಲಿಗೆ ಹುಡುಕಿಕೊಂಡು ಹೋಗಿ ನೋಡಬೇಕಿತ್ತು. ಅಂಥ ಒಂದು ಅನುಭವ ಸುಮಾರು ಇಪ್ಪತ್ತೇಳು ವರ್ಷಗಳ ಹಿಂದೆ ನನಗಾಯಿತು. ಅದೆಂದರೆ..

**ದಿನಕ್ಕೊಂದಾದರೂ ಸಿನೆಮಾ ನೋಡುವವರ ಒಂದು ಅನುಭವ ಇಲ್ಲಿ ಬಿತ್ತರಗೊಂಡಿದೆ**

1988ರಲ್ಲಿ ಶ್ರೀಕೃಷ್ಣ ಆಲನಹಳ್ಳಿಯ ಒತ್ತಾಯದ ಮೇರೆಗೆ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಲೆಂದು ಮೈಸೂರಿಗೆ ಹೋದೆ. ಯುವರಾಜರಾದ ಸನ್ಮಾನ್ಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕವಿಗಳಿಗೆಂದೇ ವಿಶೇಷ ಔತಣ ಕೂಟ ಏರ್ಪಡಿಸಿದರು. ಅರಮನೆಗೆ ಕರೆದೊಯ್ಯಲು ಸಾಲಂಕೃತ ಸಾರೋಟುಗಳು ಬೃಂದಾವನ ಹೋಟಲ್ ಅಂಗಳದಲ್ಲಿ ನಿಂತವು. ಹೊರಡುವ ಸಮಯಕ್ಕೆ ಸರಿಯಾಗಿ ಸಿಕ್ಕ ಸ್ಥಳೀಯ ಪತ್ರಿಕೆ ತೆರೆದು ಕಣ್ಣಾಡಿಸಿದೆ. ಸ್ಟರ್ಲಿಂಗ್ ಚಿತ್ರಮಂದಿರದಲ್ಲಿ ಚಾಪ್ಲಿನ್‌ನ ಸಿಟಿ ಲೈಟ್ಸ್ ಚಿತ್ರ ಪ್ರದರ್ಶನಗೊಳ್ಳುತ್ತಿರುವ ಮಾಹಿತಿ ಇತ್ತು. ಸ್ಟರ್ಲಿಂಗ್ ಎಲ್ಲಿದೇಂತ ಕೇಳಿದ್ದಕ್ಕೆ ಆಲನಹಳ್ಳಿ ಸಿಡಿಮಿಡಿಗೊಂಡ, ಯುವರಾಜರ ಜೊತೆ ಊಟ ಮಾಡುವ ಅನುಭವಕ್ಕಿಂತ ಸಿಟಿ ಲೈಟ್ಸ್ ಚಿತ್ರ ಕೊಡುವ ಅನುಭವ ದೊಡ್ಡದು ಎಂದು ಹೇಳಿ ಹೊರಟೆ. ಸ್ಟರ್ಲಿಂಗ್ ತಲುಪುವ ಹೊತ್ತಿಗೆ ಚಿತ್ರ ಶುರುವಾಗಿ ಹದಿನೈದು ನಿಮಿಷವಾಗಿತ್ತು. ಉಸಿರು ಬಿಗಿ ಹಿಡಿದು ಕೂತು ಚಿತ್ರವನ್ನು ಆಸ್ವಾದಿಸಲಾರಂಭಿಸಿದೆ. ಪುನಃ ಟಿಕೆಟ್ ಮತ್ತು ಒಂದು ತುಂಡು ಬ್ರೆಡ್ ಖರೀದಿಸಿ ಅದರ ಎರಡನೆ ಆಟ ನೋಡಿದೆ ರೆಪ್ಪೆಯಾಡಿಸದಂತೆ. ಅಳಲಾರದೆ ನಗಲಾರದೆ ಬಿಕ್ಕಳಿಸಲಾರದೆ ಭಾವನೆಗಳನ್ನು ಅಡಗಿಸಿಟ್ಟುಕೊಳ್ಳಲಾಗದೆ, ಅವುಗಳನ್ನು ಕೂಗಿ ಅಭಿವ್ಯಕ್ತಿಸಲಾಗದೆ ವಿಲವಿಲನೆ ಒದ್ದಾಡಿಬಿಟ್ಟೆ. ಅದು ದೃಶ್ಯರೂಪದಲ್ಲಿರುವ ಮಹಾಕಾವ್ಯವೆಂದೆನ್ನಿಸಿತು. ಅದರ ಕುರಿತು ಹೇಳುವುದಾದರೆ..

ಸಿನೆಮಾ ತಂತ್ರ ಶೈಶಾವಸ್ಥೆಯಲ್ಲಿತ್ತು. ಅಷ್ಟೊತ್ತಿಗಾಗಲೆ ಚಾರ್ಲಿ ಚಾಪ್ಲಿನ್ ತನ್ನ ಮೂಕಿಚಿತ್ರಗಳ ಮೂಲಕ ಜಗತ್ತಿನಾದ್ಯಂತ ಮನೆಮಾತಾಗಿದ್ದ. ಪ್ರಪಂಚದ ಪ್ರಸಿದ್ಧ ರಾಜಕಾರಣಿಗಳು, ತತ್ವಜ್ಞಾನಿಗಳು, ಕವಿಕಲಾವಿದರು, ವಿಜ್ಞಾನಿಗಳು, ಲೇಖಕರು ಅವನ ಆಪ್ತವಲಯದಲ್ಲಿದ್ದರು. ಅವನ ಗೋಲ್ಡ್‌ರಷ್ ಚಿತ್ರ ಅವರೆಲ್ಲರ ಮನಸ್ಸನ್ನು ಸೂರೆಗೊಂಡಿತ್ತು. ಸುಮಾರು ಮೂರುವರೆ ವರ್ಷಗಳ ಕಾಲ ಚಿತ್ರಕತೆ ರಚಿಸಿದ, ಚಿತ್ರದ ಹೆಸರೇನು ಎಂದು ಗೊಡಾರ್ಡ್ ಕೇಳಿದ್ದಕ್ಕೆ ಸಿಟಿ ಲೈಟ್ಸ್ ಎಂದ. ಕೇಳುಗ ನಗುವ ಸನ್ನಾಹದಲ್ಲಿರುವಾಗಲೇ 'ದಾರಿಹೋಕರಿಗೆ, ಪಾದಾಚಾರಿಗಳಿಗೆ, ಮೋಜುಗಾರರಿಗೆ, ತಲೆಹಿಡುಕರಿಗೆ, ನತದೃಷ್ಟರಿಗೆ, ಕಣ್ಣಿದ್ದವರಿಗೆ, ಕಣ್ಣಿಲ್ಲದವರಿಗೆ ಇರುಳಲ್ಲಿ ದಾರಿ ತೋರಿಸುವ, ಕೈಹಿಡಿದು ನಡೆಸುವ, ತಾರತಮ್ಯವಿಲ್ಲದೆ ಬೆಳಕು ನೀಡಬಲ್ಲ ಶಕ್ತಿ ಇರುವುದು ಬೀದಿ ದೀಪಗಳಿಗೆ' ಎಂದು ಹೇಳುವುದನ್ನು ಮರೆಯಲಿಲ್ಲ. ತಾನೇ ಲಕ್ಷಾಂತರ ಹಣ ಸುರಿದು ನಿರ್ಮಿಸಲು, ನಿರ್ದೇಶಿಸಲು ನಿರ್ಧರಿಸಿದ. ಚಿತ್ರದ ಟ್ರಾಂಪ್ ಪಾತ್ರಕ್ಕೆ ತಾನೇನೊ ಸರಿ. ಆದರೆ ಅಂಥ ಚೆಲುವೆಯ ಪಾತ್ರಕ್ಕೆ ವರ್ಜಿನಿಯಾ ಚೆರಿಲ್‌ಳನ್ನು ಆಯ್ಕೆ ಮಾಡಿದ. ಕುಡುಕ ಸಿರಿವಂತ ಮತ್ತಿತರ ಪಾತ್ರಗಳಿಗೆ ಫ್ಲೋರೆನ್ಸ್ ಲೀ, ಹ್ಯಾರಿ ಮೆರಿಸ್‌ರಂಥವರಿಗೆ ಮೀಸಲಿರಿಸಿದ. ಉಳಿದಂತೆ ತನ್ನ ಹಿಂದಿನ ಚಿತ್ರಗಳ ತಂತ್ರಜ್ಞರನ್ನು ತೆಗೆದುಕೊಂಡ. ಚಿತ್ರೀಕರಣ ಹಲವು ತಿಂಗಳುಗಳ ಪರ್ಯಂತರ ನಡೆಯಿತು. ಅದಕ್ಕೆ ಸುಮಾರು ಒಂದೂವರೆ ದಶಲಕ್ಷ ಹಣ ಖರ್ಚಾಯಿತು. ಎಂಬತ್ತೇಳು ನಿಮಿಷಗಳ ಆ ಅಜರಾಮರ ಕಲಾಕೃತಿ ಗಳಿಸಿದ್ದು ಐದುಲಕ್ಷದ ಹತ್ತೊಂಬತ್ತು ಸಾವಿರದ ಒಂದು ನೂರಾ ಎಂಬತ್ತೊಂದು

ರೂಪಾಯಿ, ಅದೂ ಕೆಲವೇ ತಿಂಗಳುಗಳಲ್ಲಿ. ಲಂಡನ್ನಿನಲ್ಲಿ ಬಿಡುಗಡೆಗೊಂಡ ಚಿತ್ರವನ್ನು ನೋಡಿದವರು ಆಲ್ಬರ್ಟ್ ಐನ್‌ಸ್ಟಿನ್, ಚರ್ಚಿಲ್, ಮಹಾತ್ಮ ಗಾಂಧೀಜಿ (ಅದೇ ಸಂದರ್ಭದಲ್ಲಿ ರಾಷ್ಟ್ರಪಿತ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲೆಂದು ಲಂಡನ್ನಿಗೆ ಆಗಮಿಸಿದ್ದರು) ಆ ಸಿಟಿ ಲೈಟ್ಸ್ ಅತಿಗಣ್ಯರನ್ನು ಬಿಕ್ಕಳಿಸುವಂತೆ ಮಾಡಿತು. ಹಾಡಿಹರಸಲು ಸೂಕ್ತಪದಗಳಿಗಾಗಿ ತಡಕಾಡುವಂತೆ ಮಾಡಿತು.

ಸಿಟಿ ಲೈಟ್ಸ್ ಏಳೆಂಟು ಕಥೆ ಉಪಕಥೆಗಳ ಸಂಗಮ. ನಗರದ ಪ್ರತಿಷ್ಠಿತ ಕ್ಲಬ್ಬೊಂದರಲ್ಲಿ ಶ್ರೀಮಂತರಿಬ್ಬರು ಸಾಮಾನ್ಯ ಮನುಷ್ಯನ ಅಸ್ಥಿರ ಸ್ವಭಾವ ಕುರಿತು ಏರು ದನಿಯಲ್ಲಿ ವಾಗ್ವಾದ ನಡೆಸುತ್ತಾರೆ. ಬೀದಿ ದೀಪದ ನೆರಳಲ್ಲಿ ಮಲಗಿದ್ದ ಭಿಕಾರಿಯನ್ನು (ಚಾಪ್ಲಿನ್) ಮನೆಗೆ ಕರೆದೊಯ್ದು ಕುಡಿಸಿ ತಿನ್ನಿಸಿ ಪುನಃ ಸ್ವಸ್ಥಾನ ಸೇರಿಸುತ್ತಾನೆ. ಅದು ಕನಸೋ ನನಸೋ ಭಿಕಾರಿಗೆ ಗೊಂದಲ, ಭಿಕಾರಿಗೆ ಹೂಮಾರಿ ಜೀವಿಸು, ಅಂದ ಚೆಲುವೆಯ ಪರಿಚಯ, ತಾನು ಆಗರ್ಭ ಶ್ರೀಮಂತನೆಂದು ಆಕೆಯಲ್ಲಿ ನಂಬಿಕೆ ಹುಟ್ಟಿಸುತ್ತಾನೆ. ಬಹುಮಾನದಾಸೆಗೆ ಬಾಕ್ಸಿಂಗ್ ಸ್ಪರ್ದೆಯಲ್ಲಿ ದೈತ್ಯ ಬಾಕ್ಸರನನ್ನು ಸೋಲಿಸುತ್ತಾನೆ. ಆ ಹಣದಲ್ಲಿ ಚೆರಿಲ್‌ಳಿಗೆ ಶಸ್ತ್ರಚಿಕಿತ್ಸೆ ಮಾಡಿಸಿ ನೋಟ ಬರಿಸುತ್ತಾನೆ, ಕೊನೆಗೆ ತಾನು ನೇಪಥ್ಯಕ್ಕೆ ಸರಿಯುತ್ತಾನೆ. ಇದೊಂದು ಮನೋಜ್ಞ ಕಲಾಕೃತಿ. ಈ ಚಿತ್ರವನ್ನು ನೋಡಿ ರೀಫ್ರೆಶ್ಶಾಗುತ್ತಲೇ ಇರುವೆ. ಈ ಚಿತ್ರವನ್ನು ಕನ್ನಡದಲ್ಲಿ ನಿರ್ಮಿಸುವಂತೆ ಹಲವು ನಿರ್ದೇಶಕರ ಹಾಗೂ ಕಲಾವಿದರ ಬಳಿ ಕೇಳಿಕೊಂಡೆ. ಆದರೆ ಅವರೆಲ್ಲ ನಕ್ಕು ಸುಮ್ಮನಾದರು. ಮುಂದೆ ಕುಮಾರ್ ಗೋವಿಂದ್ ಇದನ್ನು ಕನ್ನಡದಲ್ಲಿ ನಿರ್ಮಿಸಿದರು. ಹಲವು ಚಿತ್ರಮಂದಿರಗಳಲ್ಲಿ ಶತದಿನೋತ್ಸವವನ್ನು ಆಚರಿಸಿತಲ್ಲದೆ ಹಲವು ಪ್ರಾದೇಶಿಕ ಭಾಷೆಗಳಲ್ಲಿ ರಿಮೇಕಾಯಿತು. ಏನೇ ಆಗಲಿ ಸಿಟಿ ಲೈಟ್ಸ್ ನೋಡುವುದೊಂದು ಅವಿಸ್ಮರಣೀಯ ಅನುಭವ.

---



**ಚಿತ್ರಮಂದಿರದಲ್ಲಿ**

- *ಪಾಪ್ ಕಾರ್ನ್‌ಗೆ ಎಷ್ಟು ಬೆಲೆ?*

  *100 ರೂಪಾಯಿ ಮೇಡಂ*
- *ಸರಿ, ಎರಡು ಪ್ಯಾಕೆಟ್ ಕೊಡಿ*



**ಮಾರ್ಕೆಟ್‌ನಲ್ಲಿ**

- *ಬಾಳೆಹಣ್ಣು ಎಷ್ಟು?*

  *ಕೇಜಿಗೆ 40 ರೂಪಾಯಿ*
- *ನಮ್ಮನ್ನು ಲೂಟಿ ಮಾಡ್ತೀರಾ ನೀವು..*

ಸಿನಿಮಾ ವಿಶೇಷ

# ಮಾರುಕಟ್ಟೆಗೆ ತಕ್ಕ ಬೆಳೆ

**- ಜೋಗಿ**

**ಚಿ**ತ್ರರಂಗ ಮೂಲತಃ ನಿರ್ದೇಶಕರ ಕರ್ಮಭೂಮಿ. ಇಲ್ಲಿ ನಿರ್ಮಾಪಕ ಒಬ್ಬ ವ್ಯಾಪಾರಿ. ನಟ ಒಬ್ಬ ಸಂಚಾರಿ. ಪ್ರೇಕ್ಷಕ ಒಬ್ಬ ಸಹಚಾರಿ. ಹೀಗೆಂದ ಮೇಲೆ ಹೊಸ ಆಲೋಚನೆಗಳೇನಾದರೂ ಹುಟ್ಟುವದಿದ್ದರೆ ಅದು ನಿರ್ದೇಶಕನ ಮೂಲಕವೇ ಆಗಬೇಕು. ಅವನು ರೈತನಿದ್ದ ಹಾಗೆ. ತನ್ನ ಮುಂದಿರುವ ಎಂಟೆಕರೆ ಹೊಲದಲ್ಲಿ ಟೊಮ್ಯಾಟೊ ಬೆಳೆಯಬೇಕೋ, ಕಲ್ಲಂಗಡಿಯೋ ಅಂತ ಅವನೇ ನಿರ್ಧಾರ ಮಾಡುವವನು. ಹಾಗೆ ನಿರ್ಧರಿಸುವ ಹೊತ್ತಿಗೆ ಅವನು ಮಣ್ಣಿನ ಗುಣ, ತನ್ನಲ್ಲಿರುವ ಬೀಜ, ನೀರಾವರಿ ವ್ಯವಸ್ಥೆ, ಮುಂಗಾರು ಮಳೆ - ಎಲ್ಲವನ್ನೂ ಲೆಕ್ಕ ಹಾಕಿರುತ್ತಾನೆ. ಮಾರುಕಟ್ಟೆಯಲ್ಲಿ ಯಾವ ಬೆಳೆಗೆ ಬೆಲೆ ಜಾಸ್ತಿ ಅನ್ನೋದನ್ನೂ ಅವನು ತಿಳಿದುಕೊಂಡಿರಬೇಕಾಗುತ್ತದೆ.

> **ಕಳಪೆ ಮಾಲು ಬಳಸಿ ಮಾಡಿದ ಪದಾರ್ಥ ಬಾಳಿಕೆ ಬರುವುದೆ?**

ಆದರೆ ಕೆಲವೊಮ್ಮೆ ರೈತ ತುಂಬಾ ತನ್ಮಯನಾಗಿ, ಪರಿಸರ ಪ್ರೇಮಿಯಾಗಿ, ಮಣ್ಣಿನ ಮಗನಾಗಿ ಕೆಲಸ ಮಾಡುತ್ತಾನೆ. ಯಾರೇನೇ ಹೇಳಿದರೂ ಕೇಳದೆ, ತನಗೆ ಹಾಗಲಕಾಯಿಯೇ ಇಷ್ಟ ಎಂದು ಹಾಗಲಕಾಯಿ ಬೆಳೆಯುತ್ತಾನೆ. ಅವನ ದುರಾದೃಷ್ಟಕ್ಕೆ ಆ ವರ್ಷ ಹಾಗಲಕಾಯಿ ಕೊಳ್ಳುವವರ ಸಂಖ್ಯೆ ಕ್ಷೀಣಿಸಿರುತ್ತದೆ. ನೀಲಂ ಮಾವಿನ ಹಣ್ಣು ಬೆಳೆದ ವರ್ಷ ಆ ಊರಿನ ಬಹುತೇಕರಿಗೆ ಸಕ್ಕರೆ ಕಾಯಿಲೆ ಬಂದುಬಿಟ್ಟಿರುತ್ತದೆ. ಹೀಗಾಗಿ ಆತ ಎಷ್ಟು ಪ್ರೀತಿಯಿಂದ ಬೆಳೆದರೂ ಫಸಲಿಗೆ ತಕ್ಕ ಬೆಲೆ ಹುಟ್ಟದೇ ಹೋಗುತ್ತದೆ. ಅದು ಮಾರುಕಟ್ಟೆಗೆ ಸಂಬಂಧಪಟ್ಟದ್ದು.

ಚಿತ್ರರಂಗ ಎಂಬ ಮಾರುಕಟ್ಟೆಯಲ್ಲಿ ರೈತನಿಗೆ ಹೊಲವಿಲ್ಲ. ಆತ ಉತ್ತಿ ಬಿತ್ತಿ ಬೆಳೆಯುವುದು ನಿರ್ಮಾಪಕನ ಹೊಲದಲ್ಲಿ. ಮಾರುಕಟ್ಟೆಯಲ್ಲಿ ಲಾಭವಾದರೂ ನಷ್ಟವಾದರೂ ನಿರ್ಮಾಪಕನಿಗೇ. ಎಷ್ಟೋ ಸಲ ನಿರ್ಮಾಪಕ ತೆಂಗು ಬೆಳೆಯಪ್ಪಾ ಅಂದರೆ ನಿರ್ದೇಶಕ ಕಂಗು ಬೆಳೆಯುತ್ತಾನೆ. ನಿರ್ಮಾಪಕ ಮೆಂತ್ಯೆ ಬಿತ್ತು ಎಂದರೆ ನಿರ್ದೇಶಕ ಮುಸುಕಿನ ಜೋಳ ಬಿತ್ತುತ್ತಾನೆ. ದುರಾದೃಷ್ಟವಶಾತ್ ತಾನು ಹೇಳಿದ್ದೊಂದು ಆತ ಬಿತ್ತಿ ಬೆಳೆಯುತ್ತಿರುವುದು ಮತ್ತೊಂದು ಎಂಬುದು ಹೊಲದ ಒಡೆಯನಿಗೆ ಗೊತ್ತಾಗುವುದು ಬೀಜ ಮೊಳಕೆ ಬಂದು, ಕುಡಿಯೊಡೆದು, ಗಿಡವಾದ ನಂತರವೇ. ಕೃಷಿ ಏನೇನೂ ಗೊತ್ತಿಲ್ಲದವನಿಗೆ ಫಸಲು ಬಂದನಂತರವೇ ತಾನು ಹೇಳಿದ್ದೊಂದು ಇಲ್ಲಿ ಆದದ್ದೊಂದು ಅನ್ನೋದು ಅರ್ಥವಾಗುತ್ತದೆ. ಅಷ್ಟು ಹೊತ್ತಿಗೆ ಹಾಕಿದ ಬಂಡವಾಳ ವಾಪಸ್ಸು ಪಡೆಯಲು, ಬೆಳೆದ ಫಸಲನ್ನು ಬಂದ ಬೆಲೆಗೆ ಮಾರುವುದಕ್ಕೆ ಆತ ಮುಂದಾಗುತ್ತಾನೆ. ಒಳ್ಳೆಯ ಬೆಲೆ ಬರಲಿ ಎಂದು ಗೋಡೌನಿನಲ್ಲಿಟ್ಟರೆ ಹುಳ ಬೀಳುವ ಭಯ, ಮುಕ್ಕಾಗುವ ಅಪಾಯ ಇರೋದರಿಂದ ಬೆಳೆಗಾರ ಯಾವುದೇ ರಿಸ್ಕು ತೆಗೆದುಕೊಳ್ಳಲು ಇಚ್ಛಿಸುವುದೂ ಇಲ್ಲ, ಅದು ಸಾಧ್ಯವೂ ಇಲ್ಲ.

ಹೀಗೆ ತನಗೆ ಯಾವ ಹತೋಟಿಯೂ ಇಲ್ಲದ ಒಂದು ವೃತ್ತಿಯನ್ನು ನಂಬಿಕೊಂಡ ಮಂದಿ ಧರಣಿ ಕೂತರೂ ಅಷ್ಟೆ ಬೆರಣಿ ತಟ್ಟಿದರೂ ಅಷ್ಟೆ. ತನ್ನಿಚ್ಛೆಯಂತೆ ಬೆಳೆಯುವುದು ಹೊಲದ

ಮಾಲೀಕನಿಗೆ ಸಾಧ್ಯವೇ ಇಲ್ಲ. ಹಾಗೇನಾದರೂ ಸಾಧ್ಯ ಆಗಬೇಕಿದ್ದರೆ ಆತನೇ ಹೊಲಕ್ಕಿಳಿಯಬೇಕು. ಇಲ್ಲಿ ಅನೇಕರಿಗೆ ಉಳುಮೆ ಗೊತ್ತಿಲ್ಲ. ಯಾವತ್ತೂ ಬೇಸಾಯ ಮಾಡಿದವರಲ್ಲ. ರಾಗಿಗೂ ಸಾಸಿವೆಗೂ ವ್ಯತ್ಯಾಸ ತಿಳಿಯದವರು ಕೃಷಿ ಮಾಡಲಾದೀತೆ? ಹೀಗಾಗಿ ಆತ ಒಳ್ಳೆಯ ಕೃಷಿಗಾರನನ್ನೇ ಹಿಡಿಯಬೇಕು. ರೈತ ಬುದ್ಧಿವಂತನಲ್ಲದೇ ಹೋದರೆ ಆತನಿಗೆ ಕ್ಷೇತ್ರಫಲ, ಬೀಜ ಫಲ ಎರಡೂ ಅರ್ಥವಾಗುವುದು ಕಷ್ಟ.

ಆಗ ಈಗಿರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಯಾರದೋ ಹೊಲ ಯಾರದೋ ಬೆಳೆ. ತಮಿಳುನಾಡಿನಲ್ಲಿ ಮೆಕ್ಕೆಜೋಳದ ಫಸಲು ಚೆನ್ನಾಗಿ ಬಂತು ಅಂತ ಗೊತ್ತಾದ ತಕ್ಷಣ ಇಲ್ಲೂ ಅದನ್ನೇ ಬೆಳೆಯುವ ಹುಮ್ಮಸ್ಸು. ಬೆಳೆ ಚೆನ್ನಾಗಿ ಬಂದು ಏನು ಉಪಯೋಗ? ಅರ್ಧ ಕರ್ನಾಟಕದಲ್ಲಿ ಮೆಕ್ಕೆಜೋಳ ತಿನ್ನುವವರೇ ಇಲ್ಲವಲ್ಲ! ಅದು ಅರ್ಥವಾಗುವ ಹೊತ್ತಿಗೆ ತುಂಬಾ ತಡವಾಗಿ ರೈತ ಪರಾರಿ ಹೊಲದೊಡೆಯ ಭಿಕಾರಿ.

ರೈತನೇ ದೇಶದ ಬೆನ್ನೆಲುಬು ಎಂಬಂತೆ ನಿರ್ದೇಶಕನೆಂಬ ರೈತನೇ ಚಿತ್ರರಂಗದ ಬೆನ್ನೆಲುಬು. ಅವನಿಗೆ ಹೊಸ ಹೊಸ ಕೃಷಿ ವಿಧಾನಗಳು, ಮಾರುಕಟ್ಟೆ, ಮಣ್ಣಿನ ಗುಣ ಗೊತ್ತಿರಬೇಕಾಗುತ್ತದೆ. ಮೆಣಸಿನಕಾಯಿ ತಿನ್ನುವವರು ಕಮ್ಮಿಯಾಗಿ ಕ್ಯಾಪ್ಸಿಕಮ್ ತಿನ್ನುವವರ ಸಂಖ್ಯೆ ಹೆಚ್ಚಾಗಿದೆ ಅನ್ನುವುದನ್ನು ಆತ ತಿಳಿದುಕೊಂಡಿರಬೇಕಾಗುತ್ತದೆ. ಒಂದು ಕಾಲದಲ್ಲಿ ಅಂಥ ರೈತರು ಕನ್ನಡ ಚಿತ್ರರಂಗದಲ್ಲಿದ್ದರು. ಪುಟ್ಟಣ್ಣ ಕಣಗಾಲ್, ದೊರೆ ಭಗವಾನ್, ಗೀತಪ್ರಿಯ, ಭಾರ್ಗವ, ರಾಜೇಂದ್ರಸಿಂಗ್ ಬಾಬು, ಡಿ. ರಾಜೇಂದ್ರ ಬಾಬು, ಶೇಷಗಿರಿರಾವ್, ವಿಜಯ, ಶಿವಮಣಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವರು ಮಾಡಿದ ಸಿನಿಮಾಗಳನ್ನು ನೋಡಿ. ಒಬ್ಬೊಬ್ಬರೂ ಎಷ್ಟೊಂದು ವೈವಿಧ್ಯಮಯ ಸಿನಿಮಾಗಳನ್ನು ಮಾಡಿದರು. ಹೀರೋಗಳ ಪ್ರಭಾವಳಿಯನ್ನು ಹೇಗೆ ಬದಲಾಯಿಸುತ್ತಾ ಬಂದರು. ರೆಬೆಲ್ ಸ್ಟಾರ್ ಅಂಬರೀಶ್ ಇದ್ದಕ್ಕಿದ್ದ ಹಾಗೆ ಒಲವಿನ ಉಡುಗೊರೆ ಕೊಡಬಲ್ಲವರಾಗಿ, ಸಾಹಸ ಸಿಂಹ ಕರುಣಾಮಯಿಯಾಗಿ. ಟೈಗರ್ ಪ್ರಭಾಕರ್ ಮಾತೃವಾತ್ಸಲ್ಯಕ್ಕೆ ಸಾಕ್ಷಿಯಾಗಿ ಬೆಳೆ ಬದಲಾಗುತ್ತಿತ್ತು. ಹವಾಮಾನಕ್ಕೆ ತಕ್ಕಂತೆ. ಆಗ ಬೆಳೆಯೂ ಚೆನ್ನಾಗಿತ್ತು. ಮಾರುಕಟ್ಟೆಯೂ ಚೆನ್ನಾಗಿರುತ್ತಿತ್ತು.

ಈಗ ಬೆಳೆ ಚೆನ್ನಾಗಿಲ್ದೆ ಹೋದರೂ ಪರವಾಗಿಲ್ಲ ಮಾರುಕಟ್ಟೆ ಚೆನ್ನಾಗಿದ್ದರೆ ಸಾಕು ಎಂಬ ಅಭಿಪ್ರಾಯ ಹುಟ್ಟಿಕೊಂಡಿದೆ. ಹೀಗಾಗಿ ಆಯಾ ಮಾರುಕಟ್ಟೆಗೆ ತಕ್ಕ ಬೆಳೆ ಬೆಳೆಯುವ ಹೊಸ ಟ್ರೆಂಡು ಹುಟ್ಟಿಕೊಂಡಿದೆ. ಬೆಳೆದ ಮಾಲನ್ನು ಮೂರೇ ದಿನಕ್ಕೆ ಅಲ್ಲಿ ಇಲ್ಲಿ ಒಯ್ದು ಮಾರಿಬಿಡುವ ಆತುರ. ರುಚಿ ತಿಳಿಯುವ ಮುನ್ನವೇ ಮಾಲು ಖರ್ಚಾಗಿಬಿಟ್ಟರೆ ಸಾಕೆಂಬ ಆಸೆ.

ಬಹುಶಃ ತುಂಬಾ ಕಾಲ ಉಳಿಯುವಂಥದ್ದೇನನ್ನೂ ಈಗ ಬೆಳೆಯಲಾಗುತ್ತಿದೆ ಎಂದು ಹೇಳುವಂತಿಲ್ಲ. ರೆಡಿಮೇಡ್ ಉಪ್ಪಿನಕಾಯಿ ಬಾಳಿಕೆ ಬರುವುದಿಲ್ಲ. ತುಂಬಾ ಕಷ್ಟಪಟ್ಟು ಶೇಖರಿಸಿಟ್ಟು ಹಂಚಲು ಯತ್ನಿಸಿದರೆ ಹುಳ ಬೀಳುತ್ತದೆ. ಯಾಕೆಂದರೆ ಬಳಸಿರುವ ಪದಾರ್ಥ ಕಳಪೆಯದ್ದಾಗಿರುತ್ತದೆ.

ಸಿನಿಮಾ ವಿಶೇಷ

# ಅಜ್ಜಿಗೆ ಫಿಲ್ಮೀ ಕಲ್ಚರ್ ಷಾಕ್

**- ಇ.ಆರ್. ರಾಮಚಂದ್ರನ್**

> **‘ಒಳ್ಳೆ ಕಥೆ, ಹಾಡು ಚೆನ್ನಾಗಿದ್ರೆ ಆ ಪಿಕ್ಚರ್ ಥಿಯೇಟರ್‌ಗೇ ಬರಲ್ಲ! ಇದು ನಮ್ಮ ಪಿಕ್ಚರ್‌ಗಳ ಹಣೇಬರಹ’**

ಅಜ್ಜಿ ಟಿವಿಲಿ ‘ಸ್ಕೂಲ್ ಮಾಸ್ಟರ್’ ಪಿಕ್ಚರ್ ಮುಗಿದಾಗ ಕಣ್ಣೊರೆಸಿಕೊಂಡರು.

‘ಏನಾಯಿತಜ್ಜಿ! ಚಿಕ್ಕ ವಯಸ್ಸಿನಲ್ಲಿ ಸ್ಕೂಲ್ ಮಾಸ್ಟರರ ಪೆನ್ ಕದ್ದ ಹುಡುಗ ಮುಂದೆ ಅವನು ಪೊಲೀಸ್ ಇನ್‌ಸ್ಪೆಕ್ಟರಾಗಿ ಅದೇ ಪೆನ್ನಿನಲ್ಲಿ ಮಾಸ್ಟರ್‍ರಿಗೆ ಅವರು ಮನೆ ಮಾರೋದಿಲ್ಲಾಂತ ಸೈನ್ ಮಾಡಿಸಿಕೊಡ್ತಾನಲ್ಲಾ.. ಅದನ್ನು ನೋಡಿ ಅಳು ಬಂತಾ...’

‘ಇಲ್ವೋ ಪೆದ್ದೆ! ಅಷ್ಟು ಚೆನ್ನಾಗಿದ್ದ ಪಿಕ್ಚರ್‌ಗಳು ಈಗ ಎಷ್ಟು ಹುಡುಕಿದರೂ ಸಿಕ್ಕಲ್ಲ.. ಅದನ್ನು ನೆನಸಿಕೊಂಡು ಅಳು ಬಂತು!’

‘ಈಗಿನ ಪಿಕ್ಚರ್‌ಗಳಿಗೆ ಏನಾಗಿದೆ ಅಂತಿಯಾ?’

‘ಒಳ್ಳೆ ಕಥೆಯಿದ್ದರೆ, ಹಾಡು ಚೆನ್ನಾಗೇ ಇರಲ್ಲ. ಹಾಡು ಇಂಪಾಗಿದ್ರೆ, ಕಥೇಲಿ ತಿರುಳು-ಮರಳು ಇರಲ್ಲ. ಎರಡೂ ಚೆನ್ನಾಗಿದ್ರೆ, ಆ ಪಿಕ್ಚರ್ ಥೀಯೇಟರ್‌ಗೇ ಬರಲ್ಲ! ಇದು ನಮ್ಮ ಪಿಕ್ಚರ್‌ಗಳ ಹಣೇಬರಹ.’

‘ಅದು ನಿಜ ಅಜ್ಜಿ. ಕಾಂಪಿಟೇಷನ್ ಹೆಚ್ಚು ನೋಡು. ಅದಕ್ಕೆ ಹಾಗಾಗೋದು.’

‘ನಿನ್ನ ತಲೆ! ಕಾಂಪಿಟೇಷನ್ ಎಲ್ಲಿದೆಯೋ? ಯಾರು ಹೆಚ್ಚು ಅಧ್ವಾನವಾಗಿ ಪಿಕ್ಚರ್ ಮಾಡ್ತಾರೋಂತ ಕಾಂಪಿಟೇಷನ್ ಇರ್ಬೇಕು! ಮುಂಚೆ ಪಿಕ್ಚರ್ ಹಾಡುಗಳು ಎಷ್ಟು ಚೆನ್ನಾಗಿರೋದು. ಅಮರ ಮಧುರ ಪ್ರೇಮ..., ಉಡುಗೊರೆಯನ್ನು ತಾ ತಂದ, ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ........’

‘ಅಜ್ಜಿ! ವಂಡರ್‌ಫುಲ್ ಐ ಸೇ! ಇದೆಲ್ಲಾ ಬಂದು ಐವತ್ತು ವರ್ಷದ ಮೇಲಾಯಿತಲ್ಲವಾ? ‘ಲಲಿತ ಸಹಸ್ರ ನಾಮ’ ಬಾಯಿಗೆ ಬರುತ್ತೋ ಇಲ್ವೋ.. ಈ ಹಾಡುಗಳನ್ನು ಮಾತ್ರ ಚೆನ್ನಾಗಿ ಉರು ಹೊಡೆದಿದ್ದೀಯ. ಈಗ್ಲೂ ಜ್ಞಾಪಕದಲ್ಲಿಟ್ಟಿದ್ದೀಯಾ!’

‘ಮತ್ತೇನೋ! ಈಗಿನ ಹಾಡುಗಳು? ‘ಹಾ ಳಾ ಗೋ ದೇ!’ ‘ಒನ್ದ್ ದಿನ’ ಅಂತ ಬರುತ್ತಲ್ಲೋ.. ಅದರಲ್ಲೇನಿದೆ?’

‘ಅದು ರ್‍ಯಾಪ್ ಅಜ್ಜಿ! ಅದೇ ಈಗಿನ ಫ್ಯಾಷನ್. ಅದು ಹಾಡಿದವನು ರ್‍ಯಾಪರ್.’

‘ರ್‍ಯಾಪರ್ ಅಂದ್ರೆ, ಚಾಕಲೆಟ್, ಟಾಫಿಗೆ ಹಾಕಿರುವ ಹೊರ ಕವರ್ ಅಲ್ವೇನೋ?’

'ಅಜ್ಜಿ! ಅದು ಹಳೇ ಕಾಲದ ಅರ್ಥ! ಈಗ ರ್‍ಯಾಪರ್ ಅಂದ್ರೆ ನೀನು ಹೇಳಿದ್ಯಲ್ಲ ಆ ತರಹ ಹಾಡು ಹಾಡೋವ್ನು!'

'ಅಯ್ಯೋ ರಾಮ! ಅದು ಹಾಡೇ.. ದೇವ್ರೇ ಗತಿ. ಅದಕ್ಕಿನ್ನ ಅಧ್ವಾನ್ನ ಅಂದ್ರೆ ಡ್ಯಾನ್ಸ್. ಒಟ್ಟೊಟ್ಟಿಗೆ 50 ಹುಡುಗ ಹುಡಿಗೀರು ಒಂದೇ ತರಹ ಕುಣಿದ್ರೆ ಹಳೇ ಕಾಲದ 'ಡ್ರಿಲ್' ನೋಡಿದ್ಹಂಗೆ ಇರುತ್ತೆ! ಡ್ಯಾನ್ಸ್‌ನ ಮೋಹಕತೆ, ಮಾಧುರ್ಯ ಎಲ್ಲಿ ಹೋಯ್ತೋ ನಾ ಕಾಣೆ. ನಿಮ್ಮಪ್ಪ ಸ್ಕೂಲಿಗೆ ಚೆಡ್ಡಿ, ಷರ್ಟು, ಬಿಳಿ ಕಾನ್ವಾಸ್ ಶೂ ಹಾಕಿಕೊಂಡು ಹೋಗೋವ್ನು; ಸ್ಕೂಲ್ನವರೆಲ್ಲಾ ಒಟ್ಟಿಗೆ ಸೇರ್‍ಕೊಂಡು 'ಡ್ರಿಲ್' ಮಾಡೋವ್ರು. ನಾನು ಥಿಯೇಟರ್‍ಗೆ ಹೋಗಿ ಎಷ್ಟೋ ವರ್ಷಗಳಾಯ್ತು. ಈಗಿನ ಡ್ಯಾನ್ಸು ಟಿವಿಲಿ ನೋಡಿದ್ರೆ, ಆಗಿನ ಕಾಲದ ಡ್ರಿಲ್ ಜ್ಞಾಪಕ ಬರುತ್ತೆ!'

'ನೀನು ಕೋಪಿಷ್ಟ ಕ್ರಿಟಿಕ್ ತರಹ ಎಲ್ಲಾನೂ ಝಾಡಿಸ್ತಿದಿಯಲ್ಲಾ? ನಿನಗೆ ಯಾವ ತರಹ ಪಿಕ್ಚರ್ ಇಷ್ಟ?'

'ಪಿಕ್ಚರ್‌ಗಳಲ್ಲಿ ಒಳ್ಳೆ ಕಥೆಯೆಲ್ಲಿದೆಯೋ ಈಗ? 'ಬೆಳ್ಳಿ ಮೋಡ, ಹಣ್ಣೆಲೆ ಚಿಗುರಿದಾಗ, ನಾಂದಿ, ಹಂಸಗೀತೆ' ಕಥೆಗಳು ಎಷ್ಟು ಚೆನ್ನಾಗಿದ್ವು.'

'ಆ ತರಹ ಬರೀತಿದ್ದ ತ್ರಿವೇಣಿ, ತ.ರಾ.ಸು. ಈಗ ಇಲ್ಲ. ಅದಿರ್‍ಲಿ.... ನೀನು ಅದಕ್ಕೂ ಹಿಂದಿನ ಕಾಲದವ್ಳು ಅಲ್ವಾ? 'ಭಕ್ತ ಪ್ರಹ್ಲಾದ, ಭೂ ಕೈಲಾಸ, ಭಕ್ತ ಕುಂಬಾರ, ರೇಣುಕ ಮಹಾತ್ಮೆ, ಪಂಚ ಪಾಂಡವರು..' ನೀನು ಬಿ.ಸಿ.ಲಿ ಹುಟ್ಟಿದ್ಯಾಂತ ಅನ್ನುತ್ತೆ ನನಗೆ ಒಂದೊಂದ್ಸಲ.'

'ನಿನ್ನ ತಲೆ.. 'ಪಂಚ ಪಾಂಡವರು'ಗೆ ಹೋಗಿದ್ವಿ. ಅಲ್ಲಿ ದೊಡ್ಡ ರಾಮಾಯಣವೇ ಆಯ್ತು...'

'ಏನಾಯ್ತಜ್ಜಿ?'

'ನಾವು ನೈಟ್ ಷೋಗೆ ಲೇಟಾಗಿ ಹೋದ್ವಿ. ಪಿಕ್ಚರ್ ಆವಾಗ್ಲೇ ಶುರುವಾಗ್ಬಿಟ್ಟಿತ್ತು. ಟಿಕೆಟ್ ತೊಗೊಂಡಾಗ ಟಿಕೆಟ್ ಬುಕ್ಕಿನಲ್ಲಿ ಅದು ಕೊನೇ ಟಿಕೆಟ್. ಎರಡನೇ ಟಿಕೆಟ್ ಕೊಟ್ಟಾಗ ಅದು ಬೇರೆ ಜಾಗದಲ್ಲಿತ್ತು. ಒಳಗೆ ಹೋಗಿ, ಅಲ್ಲಿ ಅಡ್ಜಸ್ಟ್ ಮಾಡ್ತಾರೇಂತ ಅಂತ ಒಳಗೆ ಕಳಿಸ್ದ. ಒಳಗೆ, ಈಗ ಬೇರೆ ಬೇರೆ ಕೂತ್ಕೊಳ್ಳಿ. ಇಂಟರ್‍ವಲ್ನಲ್ಲಿ ಒಟ್ಟಿಗೆ ಕೂಡಿಸ್ತೀನಿ ಅಂದ. 'ಪಂಚ ಪಾಂಡವರು' ಚಿತ್ರ ನಮ್ಮಿಬ್ರಿಗೆ 'ಅಜ್ಞಾತವಾಸ' ವಾಸದಲ್ಲಿ ಶುರುವಾಯ್ತು!'

'ಹ ಹ! ಆಮೇಲೇನಾಯ್ತು?'

'ನಾನು ಕೂತ ಕಡೆ ವಿಪರೀತ ಮಕ್ಕಳು. ಆ ಸಾಲು ತುಂಬಾ ಒಂದೇ ಮನೆಯವರು ತೊಗೊಂಡಿದ್ದರೋ ಏನೋ ಒಂದೇ ಸಮ ಅಳು, ಕಿರುಚಾಟ. ಪರದೆಯ ಮೇಲೆ ಪಾಂಡು ಮಕ್ಕಳನ್ನು ನೋಡಿದರೆ, ಕೌರವರ ನೂರು ಮಕ್ಕಳು ನಮ್ಮ ಜೊತೆ ಇದಾರೇ ಅನ್ನುವ ಹಾಗೆ ಇತ್ತು! ಅವುಗಳು ಜೋರಾಗಿ ಕಿರಿಚೋವು. ನನ್ನ ಪಕ್ಕದಲ್ಲಿದ್ದವಳು ಗಾಂಧಾರಿಯ ಹಾಗೆ ಥೀಯೇಟರ್‌ನಲ್ಲೂ ಕಪ್ಪು ಕನ್ನಡಕ ಹಾಕಿದ್ದಳು.'

‘ಹಹ ಹಹ.’

‘ಕತ್ಲಲ್ಲಿ ನನ್ನ ಮಡಿಲಲ್ಲಿ ಯಾರೋ ಒಂದು ಮಗು ಇಟ್ಟು ಕೈಗೆ ಫೀಡಿಂಗ್ ಬಾಟ್ಲು ಕೊಟ್ರು. ಗಾಂಧಾರಿ ತುಟಿಪಿಟಿಕ್ ಅನ್ಲಿಲ್ಲ. ಮಗೂಗೆ ಹಾಲು ಕುಡ್ಸಿದ ಮೇಲೆ ಸ್ವಲ್ಪ ಅಳು ನಿಲ್ತು. ಆದ್ರೂ ಮಿಕ್ಕವೆಲ್ಲಾ ಕೂಗ್ತಾನೇ ಇತ್ತು.’

‘ಅಜ್ಜ ಪಿಕ್ಚರ್ ಸರಿಯಾಗಿ ನೋಡಿದ್ರಾ?’

‘ಅವ್ರು ಹೋದ ಕಡೆ ಒಂದಿಷ್ಟು ಫ್ರೆಂಡ್ಸ್ ಒಟ್ಟಿಗೆ ಸಿನಿಮಾ ನೋಡೋದಕ್ಕೆ ಬಂದಿದ್ರು. ಹೊರಡೋ ಅವ್ಸರದಲ್ಲಿ ನಿಮ್ಮಜ್ಜ ನೀರು ಕುಡ್ದಿರ್ಲಿಲ್ಲ. ಅವ್ರನ್ನ ನೀರು ಕೇಳಿ, ಅವ್ರು ಕೊಟ್ಟ ಬಾಟ್ಲಿಂದ ಪೂರ್ತಿ ಗಟಗಟ ಕುಡಿದ್ರಂತೆ. ಯಾರೋ, ಅಯ್ಯೋ ಬಾಟ್ಲಿ ಪೂರ್ತಿ ಕುಡಿದ್ಬಿಟ್ರಾಂತ, ಕೂಗ್ಕೊಂಡ್ರು. ಅಷ್ಟು ಹೊತ್ತಿಗೆ ಇವ್ರು ಬಾಟ್ಲು ಖಾಲಿ ಮಾಡ್ಬಿಟ್ಟಿದ್ದರು! ಆಗ ಮಲಗಿದವರು, ಇಂಟರ್ವೆಲ್ಗೆ ಥಿಯೇಟರ್ನವನು ಅವ್ರನ್ನ ಎಬ್ಬಿಸಿ ನಾನು ಇರೋ ಕಡೆ ಕರಕೊಂಡ್ಬಂದ. ಫೀಡಿಂಗ್ ಬಾಟ್ಲು ಇಟ್ಕೊಂಡು ಮಗೂನ ಎತ್ಕೊಂಡಿರೋದನ್ನ ನೋಡಿ, ತೂರಾಡ್ತಾ ಬಂದ ನಮ್ಮವರು ಇಷ್ಟು ಬೇಗ ಇವ್ಳು ಹೇಗೆ ಹೀಗಾದಳು ಅಂತ ಯೋಚಿಸಿ ನಿಂತಾಗ ಥಿಯೇಟರ್‌ನವನು ಇವ್ರು, ನಿಮ್ಮ ಹೆಂಡ್ತಿ ಅಲ್ಲಾ ಈಕೆ ಕೈಲಿ ಮಗು ಇದೆ ಮುಂದೆ ನಡೀರಿ ಅಂತಾ ನಮ್ಮವರ್ನ ತಳ್ಕೊಂಡು ಮುಂದೆ ನಡ್ದ. ಅವರಿಬ್ಬರಿಗೂ ಅಡ್ಡ ಹಾಕಿ ಸಮಜಾಯಿಸೋದು ಸ್ವಲ್ಪ ಕಷ್ಟಾನೇ ಆಯ್ತು. ಆಮೇಲೆ ಒಟ್ಟಿಗೆ ಕೂತ್ಕೊಂಡು ಪಿಕ್ಚರ್ ನೋಡಿದ್ವಿ.’

‘ಹಹ ಹಹ ಚೆನ್ನಾಗಿದೆ ನಿಮ್ಮ ಎಕ್ಸ್‌ಪಿರೀಯನ್ಸ್!’

‘ಒಂದು ಸಲ ಯಾವುದೋ ಪಿಕ್ಚರ್ಗೆ ಹೋದಾಗ ಒಂದು ಅಭಾಸವೇ ಆಯ್ತು!’

‘ಏನು ಮಾಡ್ದೇ ಅಜ್ಜಿ?’

‘ನಿಮ್ಮಜ್ಜನಿಗೆ ಪಿಕ್ಚರ್ ಮದ್ಯೆ ಯಾವಾಗ್ಲೂ ಏನಾದ್ರೂ ಕುರುಕಲು ತಿನ್ಬೇಕು. ಮನೇಲೇನಿದ್ರೆ ಅದನ್ನ ಡಬ್ಬದಲ್ಲಿ ಹಾಕಿ ತೊಗೊಂಡು ಹೊಗ್ತಿದ್ದೆ. ಕೋಡುಬಳೆ, ಚಕ್ಕಲಿ... ಏನಾದ್ರೂ ಸರಿ. ಒಂದು ಸಲ ರವೆ ಉಂಡೆ ತೊಗೊಂಡು ಹೋಗಿದ್ದೆ. ನಾವಿಬ್ಬರೂ ಕೂತುಕೊಳ್ಳುವುದಕ್ಕೆ ಸರಿಯಾಗಿ ದೀಪ ಆರಿಸಿದ್ರು. ನನ್ನ ಸೀಟು ಒತ್ತುತಾ ಇತ್ತು.. ಏನಾಗಿದೇ ಅಂತ ಸೀಟಿನ ಕೆಳಗೆ ನೋಡ್ತಿದ್ದೆ. ಮುಂದುಗಡೆ ಎತ್ತರದವನು ಕೂತಿದಾನೇ... ಸರಿಯಾಗಿ ಕಾಣ್ಸಲ್ಲಾಂತ ಅವ್ರು ಗೊಣಗ್ತಿದ್ರು.. ಪಿಕ್ಚರ್ ಶುರುವಾಗಿ ಸ್ವಲ್ಪ ಹೊತ್ತಿನಲ್ಲಿ ನಾನು ರವೆ ಉಂಡೆ ಮುಚ್ಚಳ ತೆಗೆದು ಡಬ್ಬ ಅವ್ರ ಮುಂದಿಟ್ಟೆ. ತೊಗೊಳಿಲ್ಲ. ನಾನು ಒಂದು ತಿಂದ ಮೇಲೂ ಅವ್ರು ಇನ್ನೂ ತೊಗೊಂಡಿರಲಿಲ್ಲ... ಈ ಸಲ ಅವರ ಪಕ್ಕೆನಾ ತಿವಿದು ಡಬ್ಬ ಮುಂದಿಟ್ಟೆ. ಒಂದು ಉಂಡೆ ತೊಗೊಂಡ್ರು.... ಸ್ವಲ್ಪ ಹೊತ್ತಿಗೆ ಇನ್ನೊಂದು ಉಂಡೆ ಖಾಲಿ ಆಯ್ತು.’

‘ಅಜ್ಜ ಶುರು ಮಾಡಿದ್ರೆ ನಿಲ್ಸಲ್ಲ.’

‘ಇದಾದ ಸ್ವಲ್ಪ ಹೊತ್ತಿನಲ್ಲಿ ನನ್ನ ಬಲಗಡೆಯಿಂದ ‘ತಿಂಡಿ ತೆಗಿ’ ಅಂತ ಮಾತು ಕೇಳಿಸ್ತು! ನಾನು, ‘ಈಗ ತಾನೆ ತಿಂದ್ರಲ್ಲ’ ಅಂದೆ. ಏನು ಹೇಳ್ತಿದೀಯಾ? ನನಗೆಲ್ಲಿ ಕೊಟ್ಟೆ?’ ಅಂತ ಶುರು ಮಾಡಿದ್ರು. ಅದೇ ಕ್ಷಣ ನನಗೆ ಹೊಳೀತು.. ‘ನನ್ನ ಎಡಗಡೆ ಪಕ್ಕದಲ್ಲಿ ಕೂತಿದ್ರಲ್ಲಾ..... ಬಲಗಡೆ ಪಕ್ಕಕ್ಕೆ ಯಾವಾಗ ಬಂದ್ರಿ... ಅದಿರ್‍ಲಿ... ಇಷ್ಟು ಹೊತ್ತು ರವೆ ಉಂಡೆ ತಿಂದಿದ್ದು ಯಾರು?’ ಅಂತ ಕೇಳ್ದೆ. ‘ಆ ಸೀಟ್ನಲ್ಲಿ ಸರಿಯಾಗಿ ಕಾಣಿಸಲ್ಲಾಂತ ನಿನ್ನ ಬಲಗಡೆ ಸೀಟಿಗೆ ಆವಾಗ್ಲೇ ಬಂದನಲ್ಲಾ..’ ಅಂದ್ರು!

ನನ್ನ ಎಡಗಡೆ ಕೂತಿದ್ದ ಆಸಾಮಿ ಕೊನೆಗೆ ಬಾಯಿ ಬಿಚ್ಚಿದ...... ‘ಸಾರಿ. ನಾನು ಬಂದಾಗ ಇಲ್ಲಿ ಸೀಟು ಖಾಲಿ ಇತ್ತು.. ಕೂತೆ. ಡಬ್ಬ ಎದುರಿಗೆ ಮತ್ತೆ ಮತ್ತೆ ಇಟ್ಟಿದ್ದರಿಂದ ನಾನು ಒಂದು ತೊಗೊಂಡೆ. ರವೆ ಉಂಡೆ ಬಹಳ ಚೆನ್ನಾಗಿತ್ತು. ಅದಕ್ಕೆ ಇನ್ನೊಂದು ತಿಂದೆ. ಬಹಳ ಸಾರಿ!!’ ಅಂದ. ‘ಕೊನೆಗೆ ಮಿಕ್ಕಿದ್ದ ಕೊನೇ ಲಾಡು ಅಜ್ಜ ತೊಗೊಂಡ್ರು.’

‘ಚೆನ್ನಾಗಿದೆ ಅಜ್ಜಿ, ನಿನ್ನ ಪ್ರೇಮ ಕಥೆ.’

‘ನಿಲ್ಲೋ ತಲೆಹರಟೆ! ಅದಕ್ಕೂ ಮುಂಚೆ ‘ನಳ ದಮಯಂತಿ’ ನಾಟಕಕ್ಕೆ ಹೋಗಿದ್ವಿ. ಆಗೊಂದು ತಮಾಷೆ ಆಯ್ತು ನೋಡು..’

‘ಏನಜ್ಜಿ ಅದು..?’

‘ನಾಟಕ ಬಹಳ ಚೆನ್ನಾಗಿದೆ ಅಂತ ನಿಮ್ಮ ಅಜ್ಜ ಅವರ ಸ್ನೇಹಿತರ ಜೊತೆ ಎರಡು ಮೂರು ಸಲ ನೋಡ್ಕೊಂಡು ಬಂದು, ನನಗೂ ಆ ನಾಟಕ ತೋರಿಸಕ್ಕೆ ಕರಕೊಂಡು ಹೋದ್ರು. ಒಂದನ್ನೇ ಎಷ್ಟು ಸರ್ತಿ ನೋಡ್ತೀರ, ಬೇಜಾರಾಗಲ್ವಾ ಅಂದ್ರೆ ಪರವಾಗಿಲ್ಲ ನೋಡೋಣ ಬಾಂತ ಕರಕೊಂಡು ಹೋದ್ರು. ದಮಯಂತಿ ನೋಡೋಕೆ ಬಹಳ ಚೆನ್ನಾಗಿದ್ಲು. ಓ ಅದಕ್ಕೆ ಇವ್ರು ಇಷ್ಟು ಸರ್ತಿ ನೋಡ್ತಾರೇಂತ ಗೊತ್ತಾಯ್ತು. ನಾಟಕದ ಮಧ್ಯೆ ವಿರಾಮ ಇತ್ತು. ಹೊರಗಡೆ ಹೋಗಿ ಕಾಫಿ ತರ್ತೀನೀಂತ ಹೋದವ್ರು ಸ್ವಲ್ಪ ಹೊತ್ತಿನಲ್ಲೇ ವಾಪಸ್ಸು ಬಂದು ನಾಟಕ ಸಾಕು, ನಡಿ ಮನೇಗೆ ಹೋಗೋಣ ಅಂತ ಅವಸರ ಮಾಡಿ ಎಬ್ಬಿಸಿದ್ರು..... ದಾರೀಲಿ ಗೊತ್ತಾಯ್ತು ಏನು ವಿಷಯಾಂತ.. ಕಾಫಿ ತರೋಕೆ ಹೋದವ್ರು ಒಳಗೆ ಕಾಫಿ ಸಿಗುತ್ತೇಂತ ಹೋಗಿ ನೋಡಿದ್ರೆ ಅಲ್ಲಿ ನಾಟಕದವ್ರು ಎಲ್ಲಾ ಬೀಡಿ ಸೇದ್ತಾ ಕೂತಿದ್ರಂತೆ. ಅವರೆಲ್ಲರ ಮದ್ಯೆ ಸೀರೆ ಉಟ್ಟಿದ್ದ ದಮಯಂತಿ ತಲೆ ಚೌರಿ ಬಿಚ್ಚಿ ಬೀಡಿ ಸೇದ್ತಾ ಇದ್ಲಂತೆ.. ದಮಯಂತಿ ಪಾತ್ರ ರೋಲ್ ಮಾಡ್ತಿದ್ದವ್ನು ಒಬ್ಬ ಹುಡುಗ! ಅದನ್ನು ನೋಡಿ ಷಾಕ್ ಆಗಿ ನನ್ನೂ ಬೇಗ ಎಬ್ಬಿಸಿ ಮನೆಗೆ ಕರಕೊಂಡು ಬಂದ್ಬಿಟ್ರು!’

‘ಹಹ.. ಹಹ ನಿಮ್ಮಿಬ್ಬರ ಸ್ಟೋರಿನೇ ಇಟ್ಕೊಂಡು ಒಂದು ಸಿನಿಮಾ ತೆಗೀತಿದ್ದೆ, ನನ್ನ ಹತ್ತಿರ ದುಡ್ಡಿದ್ದಿದ್ರೆ.’

‘ಸಾಕು ಸುಮ್ನಿರೋ ತಲೆಹರಟೆ!’

ಸಿನಿಮಾ ವಿಶೇಷ

# ಏಕ್‌ಟೇಕ್ ಬಹುತ್ ಮಿಸ್‌ಟೇಕ್

**- ಬಾಲಕೃಷ್ಣ ಹೊಸಂಗಡಿ**

**ಟೇ**ಕ್ ಇಟ್ ಈಸಿ ಎಂಬ ಸೆಂಟ್ ಪರ್ಸೆಂಟ್ ಅಚ್ಚಗನ್ನಡ ಸಿನಿಮಾದ ಸೂಪರ್ ನಿರ್ದೇಶಕ ಸಕಲ ಪ್ರಶಸ್ತಿ ಪುರಸ್ಕಾರ ತಿರಸ್ಕೃತ ಹೈ ಡೆಫಿನಿಷನ್ ಮಂದಣ್ಣರಾಯರು ಸ್ವಂತ ಸೋಫಾದಲ್ಲಿ ಒರಗಿಕೊಂಡು ಹೋಮ್‌ಥಿಯೇಟರ್‌ನಲ್ಲೇ ಹಾಲಿವುಡ್ ಸಿನಿಮಾಗಳನ್ನು ಅವಸರವಸರ ಬ್ಯಾಕ್‌ವರ್ಡ್ ಫಾರ್ವರ್ಡ್ ಮಾಡುತ್ತಾ ಇದ್ದ ಕಾಲಕ್ಕೆ 'ಚಿತ್ರಕರ್ಮ' ಪತ್ರಿಕೆಯ ಏಕದಂತ ರಾವ್ ನಮಸ್ಕರಿಸುತ್ತಾ ಮಂದಣ್ಣ ರಾಯರನ್ನು ಮಾತಿಗೆಳೆದರು.

ಏಕದಂತ : ಏನ್‌ಸಾರ್ ಟೇಕ್ ಇಟ್ ಈಸಿ ಸಿನಿಮಾದ ಮೂಲಕ ಕರ್ನಾಟಕದ ಜನರಲ್ಲಿ ಭಾರೀ ನಿರೀಕ್ಷೆ ಹುಟ್ಟಿಸಿದ್ದೀರಿ. ಹೇಗಿತ್ತು ಅನುಭವ?

ಮಂದಣ್ಣ : ಇದು ಹೈ ಥಿಂಕಿಂಗ್ ಲೋ ಮೇಕಿಂಗ್ ಸಿನಿಮಾ. ಹೈ ಮೇಕಿಂಗ್ ಲೋ ಥಿಂಕಿಂಗ್ ಸಿನಿಮಾಗಳು ಬರೋ ಕಾಲದಲ್ಲಿ ನಾವು ಸ್ವಲ್ಪ ಭಿನ್ನ ಲೋಕಲ್ ಜನಾನ ಸೇರಿಸಿ ಗ್ಲೋಬಲ್ ಸಿನಿಮಾ ಮಾಡಿದ್ದೇವೆ. ಈಗಾಗ್ಲೇ ಹಾಲಿವುಡ್ ಬಾಲಿವುಡ್‌ನೋರು ಕ್ಯೂ ನಿಂತಿದ್ದಾರೆ. ಅವರಿಗೆಲ್ಲ ಟೈದ್ದೂ ಕಥೆ ಬೇಕಂತೆ. ಅಯ್ಯೋ ಗೊತ್ತಾಗಿಲ್ವೇ ಟಿಐಇ ಟೇಕ್ ಇಟ್ ಈಸಿ. ಡಿಡಿಎಲ್‌ಜೆ ಥರಾ ದಿಲ್‌ವಾಲೇ ದುಲ್‌ಹನಿಯಾ ಲೇ ಜಾಯೇಂಗೆ ಥರಾ.

ಏಕದಂತ : ನೀವು ಕಥೆ ಕೊಡೋದಿಕ್ಕೆ ಒಪ್ಪಿಕೊಂಡ್ರಾ?

ಮಂದಣ್ಣ : ಹಾಂ ನಮ್ಮ ಕಲಾವಿದರನ್ನು ನಮ್ಮ ತಂತ್ರಜ್ಞರನ್ನು. ನಮ್ಮ ಟೀಂ ಅನ್ನೇ ಬಳಸಿಕೊಳ್ಳೋದಾದ್ರೆ ಕಥೆ ಕೊಡೋಣ ಅಂಥ ಹೇಳಿದ್ದೇನೆ.

ಏಕದಂತ : ಒಳ್ಳೆಯ ಸಲಹೆ. ಏನಂದ್ರು ಸಾರ್?

ಮಂದಣ್ಣ : ಬರ್‍ತೀವಿ ಅಂತ ಹೋದ್ರು. ಈಗ ಅವರ ಮೊಬೈಲು ವ್ಯಾಪ್ತಿ ಪ್ರದೇಶದ ಹೊರಗೆ ಇದೆ.

ಏಕದಂತ : ನಿಮ್ಮ ಸಿನಿಮಾದಲ್ಲಿ ಹೀರೋಯಿನ್ ಸಮಸ್ಯೆ ಇತ್ತು ಎಂದು ಕೇಳಿ ಬಂದಿತ್ತಲ್ಲ?

ಮಂದಣ್ಣ : ಹಾಗೇನಿಲ್ಲ. ಲೋಕಲ್ ಹೀರೋಯಿನ್ ಆಗಬೇಕು ಎಂದದ್ದಕ್ಕೆ ಈ ಸಮಸ್ಯೆ ಬಂತು ನೋಡಿ. ನಾವು ಸೆಲೆಕ್ಟ್ ಮಾಡಿದ ಹೀರೋಯಿನ್‌ಗಳ ಪೈಕಿ ಕೆಲವರ ಅಪ್ಪಂದಿರಿಗೆ ಮನಸ್ಸಿಲ್ಲ. ಇನ್ನು ಕೆಲವರ ಅಮ್ಮಂದಿರಿಗೆ ಮನಸ್ಸಿಲ್ಲ. ಇಬ್ಬರಿಗೂ ಮನಸ್ಸಿದ್ದರೆ ಮಗಳಿಗೆ ಆ್ಯಕ್ಟಿಂಗು ಬರೋದಿಲ್ಲ. ಈಗಾಗಿ ಸ್ವಲ್ಪ ಗೊಂದಲ ಆಗಿದೆ ಅಷ್ಟೇ.

ಏಕದಂತ : ಹೊಸ ಕಲಾವಿದರೇ ಆಗಿರೋವಾಗ ಟೇಕ್ ಇಟ್ ಈಸಿ. ಅಷ್ಟೊಂದು ಈಸಿಯಾಗಿ ಟೇಕಾಫ್ ಆಯ್ತಾ?

ಮಂದಣ್ಣ : ಎಲ್ಲಾಗತ್ತೆ ಹೇಳಿ? ಏಕ್ ಟೇಕ್‌ನಲ್ಲೇ ಬಹುತ್ ಮಿಸ್ಟೇಕ್ ಚಾನೆಲ್ ಕಚೇರಿಯ ದೃಶ್ಯವೊಂದರಲ್ಲಿ ಸಂಪಾದಕ ಸಿಕ್ಕಾ ಪಟ್ಟೆ ಟೇಕ್ ತಗೊಂಡು ಮಧ್ಯರಾತ್ರಿ ಮಾಡಿಬಿಟ್ಟ ಡೈಲಾಗ್‌ಗಳು ಲಾಗ ಹಾಕಿ ಹಾಕಿಯೇ ಡೈಹೋದವು.

ಮತ್ತೊಂದು ಹೆದ್ದಾರಿಯಲ್ಲಿ ಕುಡುಕನ ತಲೆಹರಟೆ ದೃಶ್ಯ ಇದೆ. ಕುಡಿದು ಬಿದ್ದವ ಕ್ಯಾಮರಾಕ್ಕೆ ಉಗಿದ್ನೇ ಹೊರ್ತು ಡೈಲಾಗ್ ಕಕ್ಕಲಿಲ್ಲ. ಅವನ ತುಟಿ ಚಲನೆಗೆ ತಕ್ಕ ಹಾಗೆ ಬೇರೆ ಡೈಲಾಗ್ ಹೊಸೆಯಬೇಕಾಯ್ತು. ನೋಡಿ ಇನ್ನೊಬ್ಬ ಪ್ರಿಕಾಷನರಿ ಅನ್ನೋ ಪದದ ಉಚ್ಚಾರಕ್ಕೇ ಇಪ್ಪತ್ತೈದು ಟೇಕ್ ತಗೊಂಡ. ಒಮ್ಮೆ ಪ್ರಿಕಾಕ್ಷನರೀನಾ ಅಂದ. ಇನ್ನೊಮ್ಮೆ ಪ್ರಿಕಾ ಸರೀನಾ ಅಂದ ಮತ್ತೊಮ್ಮೆ ಫ್ರೀ ಕಾಸ್‌ನರೀನಾ ಅಂದ ಇಡೀ ಚಿತ್ರ ತಂಡ ನರಿ, ಹುಲಿ. ಸಿಂಹಗಳಂತೆ ಅವನ ಸುತ್ತ ದುರುಗುಟ್ಟಿ ಅಕಟಕಟಾ ಕಟ ಕಟ ಹಲ್ಲು ಕಡಿದು ನಿಂತಿತ್ತು. ಪ್ಯಾಕ್ ಅಪ್ ಮಾಡೋ ಹೊತ್ತಿಗೆ ಎಲ್ಲರಿಗೂ ಪ್ರಾಣಕ್ಕೆ ಬಂತು. ಆಕ್ಷನಿಲ್ ಸಿಂಗಂ ಡೈಲಾಗಿಲ್ ಮಂಗಂ ಅಂತಾರಲ್ಲ ಹಂಗಾಯ್ತು.

ಏಕದಂತ : ನಿಮ್ಮ ತಂಡದಲ್ಲಿ ಕನ್ನಡದ ಎಲ್ಲ ಜಿಲ್ಲೆಗಳ ಕಲಾವಿದರನ್ನು ಬಳಸ್ಕೊಂಡಿದ್ದೀರಂತಲ್ಲ?

ಮಂದಣ್ಣ : ಹೌದು ಹೌದು. ಎಲ್ಲ ಕಡೆಗೂ ಸಮಾನ ಪ್ರಾತಿನಿಧ್ಯ ಕಲ್ಪಿಸಿದ್ದೇವೆ. ನಮ್ಮ ಊರಿನ ಕಲಾವಿದ ಇದ್ದಾನೆ. ನೋಡೋಣ ಅಂತ ಜನರಿಗೆ ಅನ್ನಿಸುತ್ತೆ. ಎಂಥದ್ದೇ ರೋಲ್‌ನಲ್ಲಿರಲಿ ಜನ ನೋಡ್ತಾರೆ. ಆಯಾ ಊರಿನ ಕಲಾವಿದನೇ ಚಿತ್ರಕ್ಕೆ ಬಿಟ್ಟಿ ಪ್ರಚಾರ ಕೊಡ್ತಾನೆ. ಹೋದಲ್ಲಿ ಬಂದಲ್ಲಿ ಚಿತ್ರದ ಬಗ್ಗೆ ಹೇಳಿಯೇ ಹೇಳ್ತಾನೆ. ಹಾಗಾಗಿ ಎಲ್ಲ ಜಿಲ್ಲೆಗಳಲ್ಲೂ ಚಿತ್ರದ ಬಗ್ಗೆ ಪ್ರಚಾರ ಆಗಿರ್ತದೆ.

ಏಕದಂತ : ಇಷ್ಟೊಂದು ಜಿಲ್ಲೆಗಳಿಂದ ಬಂದ ಕಲಾವಿದರನ್ನು ಸಾಗ ಹಾಕೋದು ಸವಾಲಲ್ವಾ?

ಮಂದಣ್ಣ : ಅಯ್ಯೋ ಅದನ್ನೇನ್ ಕೇಳ್ತೀರಿ. ನಾನು ಜಿಲ್ಲೆ ಹೇಳಲ್ಲ. ಮೇಕ್‌ಅಪ್‌ಗೆ ಅಂತ ಪಕ್ಕದ ಜಿಲ್ಲೆಯಿಂದ ಒಬ್ಬ ಕಲಾವಿದ ಬಂದಿದ್ದ. ಶೂಟಿಂಗ್ ಹೊತ್ತಿಗೆ ಕರೆಕ್ಟ್ ಕೈಕೊಡ್ತಿದ್ದ. ಹುಡುಕಿ ಹುಡುಕಿ ಸುಸ್ತಾಗಿ ಹೋಗಿ ನೋಡಿದ್ರೆ ಎಲ್ಲೋ ಮೂಲೆಯಲ್ಲಿ ನಿಂತು ಆರಾಮ ಬೀಡಿ ಸೇದಿರ್ತಿದ್ದ. ಇನ್ನು ಸ್ಟಂಟ್ ಮಾಸ್ಟರ್ ಇನ್ನೊಂದು ಜಿಲ್ಲೆಯವ. ಫೈಟಿಂಗ್ ಸೀನ್ ತೆಗೆಯಣ್ಣ ಅಂದ್ರೆ ಸಮುದ್ರದ ನೀರಲ್ಲಿ ಚೆಲ್ಲಾಟ ಆಡ್ತಿದ್ದ. ಸಂದ್ರ ನೋಡ್ದೆ ಭಾಳ ವರ್ಷ ಆಯ್ತು. ಚೂರ್ ತಡೀರಿ ಸಾರ್ ಅಂತಿದ್ದ.

ಏಕದಂತ : ನಿಮ್ಮ ಸಿನಿಮಾದ ಹೈಲೈಟ್ ಏನ್ಸಾರ್?

ಮಂದಣ್ಣ : ನೀವು ಹೈಲೈಟ್ ಅಂದಾಗ ನೆನಪಾಯ್ತು ನೋಡಿ. ಈ ಅನ್‌ಪ್ರೊಫೆಷನಲ್ ಲೈಟ್‌ಬಾಯ್‌ಗಳು ಹಳೇ ಗುಜರಿ ವಯರಿಂಗ್ ಇರೋ ಕಡೆ ಪ್ಲಗ್ ಮಾಡಿ ಲೈಟ್‌ಗಳನ್ನೆಲ್ಲ ಒಡೆದು ಹಾಕಿದ್ರು. ವಾರ್ತೆ ಓದುವ ಒಂದು ದೃಶ್ಯಕ್ಕೆ ನೂರಾ ಐವತ್ತು ಲೈಟ್ ಒಡೆದು ಹಾಕಿದ್ದೂ ಒಂದು ದಾಖಲೇನೇ ಬಿಡಿ. ಲೈಟ್‌ಗಳು ಒಡೆದು ಹೋದದ್ದೂ ಹೈವೋಲ್ಟೇಜ್‌ನ ಹೈಲೈಟ್‌ನಿಂದಲೇ ಅಲ್ವಾ ಸಾರ್ ಲೈಟ್‌ಬಾಯ್‌ಗಳು ನಮ್ಮ ಪಾಲಿಗಂತೂ ಬ್ರೈಟ್‌ಬಾಯ್‌ಗಳಾಗದೇ ನೈಟ್‌ಬಾಯ್‌ಗಳಾದ್ರು ಬಿಡಿ.

ಏಕದಂತ : ನಿಮ್ಮ ಸಿನಿಮಾ ಈ ಬಾರಿ ಕನ್ನಡಕ್ಕೆ ಆಸ್ಕರ್ ತರುತ್ತೆ ಅಂತಾರಲ್ಲ?

ಮಂದಣ್ಣ : ತರದೇ ಏನ್ ಸಾರ್. ಇಷ್ಟು ದಿನ ನಾನು ಪ್ರಶಸ್ತಿ ತಿರಸ್ಕೃತ ನಿರ್ದೇಶಕನಾಗಿದ್ದೆ. ಎಲ್ಲೇ ಪ್ರಶಸ್ತಿಗೆ ಅರ್ಜಿ ಹಾಕಿದ್ರೂ ಯಾರ್‍ಯಾರೋ ಲಾಭ ಮಾಡಿಕೊಂಡು ಪ್ರಶಸ್ತಿ ಎಗರಿಸಿಬಿಡ್ತಿದ್ರು. ಕೆಲವೊಮ್ಮೆ ಟೈಟಲಲ್ಲೇ ಇಂತಿಂಥ ಪ್ರಶಸ್ತಿ ವಂಚಿತ ಸಿನಿಮಾ ಇದು ಎಂದೂ ಹಾಕಿದ್ದೆ. ಇನ್ನು ಹಾಗಲ್ಲ, ಆಸ್ಕರ್ ಗೆದ್ದೇ ಗೆಲ್ತೀವಿ ಅನ್ನೋ ನಂಬಿಕೆ ಇದೆ. ನಮ್ಮ ಪ್ರತಿಯೊಬ್ಬ ಕಲಾವಿದರಿಗೂ ಆಸ್ಕರ್‌ಗಿಂತ ಕಮ್ಮಿಯ ಯಾವ ಪ್ರಶಸ್ತಿಯನ್ನೂ ಕೊಡಾಕಾಗಲ್ಲ. ಹಾಲಿವುಡ್ಡಿನೋರೇ ನಮ್ಮ ಚಿತ್ರಕಥೆ ಕೇಳಿದ್ದಾರೆ. ಅಂದ ಮೇಲೆ ಮುಗೀತು ನೋಡಿ.

ಏಕದಂತ : ಅಕಸ್ಮಾತ್ ಆಸ್ಕರ್ ಸಿಕ್ಕಿಲ್ಲ ಅಂದ್ರೆ?

ಮಂದಣ್ಣ : ಹಾಗೆಲ್ಲ ಅಪಶಕುನ ಆಡ್ಬೇಡಿ. ಅಕಸ್ಮಾತ್ ಆಸ್ಕರ್ ಸಿಕ್ಕಿಲ್ಲ ಅಂದ್ರೆ ನಾವು ಎದೆಗುಂದಲ್ಲ. ವೀರಕನ್ನಡಿಗರು ನಾವು. ಕಟ್ಟುವೆವು ನಾವು ಹೊಸ ಮೆಗಾ ಆಸ್ಕರ್ ಪ್ರಶಸ್ತಿಯೊಂದನು. ನಮ್ಮ ತಂಡದ ಎಲ್ಲ ಕಲಾವಿದರಿಗೆ ನೀಡಿ. ನಂತರ ಪಕ್ಕದ ರಾಜ್ಯಗಳ ತಂಡಗಳಿಗೂ ನೀಡಿ. ಅದನ್ನೇ ರಾಷ್ಟ್ರಪ್ರಶಸ್ತಿ ಮಾಡಿ ಉಳಿದಿದ್ದರೆ ಹಾಲಿವುಡ್ಡಿನೋರಿಗೂ ಪುರಸ್ಕಾರದ ಕಡ್ಡಿ ನೀಡಿ ಆಸ್ಕರ್‌ಗೇ ಸವಾಲಾಗಿ ನಿಲ್ಲುವೆವು. ನಾವು ಬಿಡುವೆವೇ ಜಾಗತಿಕ ಮಟ್ಟದಲ್ಲೇ ಪ್ರಶಸ್ತಿ ಕೊಡೋ ತಂಡ ಕಟ್ಟುವೆವು ಕಟ್ಟುವೆವು. ನಾವು ಹೊಸ ಪ್ರಶಸ್ತಿಯೊಂದನು.

ಹೀಗೆ ಮುಂದುವರೆಯುತ್ತಿದ್ದ ಮಂದಣ್ಣರಾಯರ ಪ್ರಲಾಪ ಕಂಡು ಏಕದಂತ ರಾವ್ ಅಲ್ಲಿಂದ ಕಾಲ್ಕಿತ್ತರು ಎಂಬಲ್ಲಿಗೆ ಟೇಕ್ ಇಟ್ ಈಸಿಯ ಸಂದರ್ಶನ ಪ್ರಹಸನವು ಮುಕ್ತಾಯವು.

# ಸಿನಿ ಕ್ವಿಜ್

- ಆನಂದ

ಸಿನಿಮಾ ವಿಶೇಷ

*(ಉತ್ತರಗಳು ತಿಳಿಯದೆ ಇದ್ದವರು ತಾವು ದಡ್ಡರು ಎಂದು ಭಾವಿಸಿ ಕೊರಗಬೇಕಿಲ್ಲ.)*

✤ ಅಮಿತಾಬ್ ಬಚ್ಚನ್ ಯಾವ ಬ್ರಾಂಡಿನ ಊದುಬತ್ತಿ ಹಚ್ಚುತ್ತಾರೆ?

✤ ಹೇಮ ಮಾಲಿನಿ ಪ್ರತಿನಿತ್ಯ ಕುಡಿಯುವ ನೀರು ಯಾವ ಕಂಪನಿಯ ಫಿಲ್ಟರ್‌ನಿಂದ ಸ್ವಚ್ಛಗೊಳ್ಳುತ್ತದೆ?

✤ ಮರದಿಂದ ಜಿಗಿದು ಬಂದು ಟೂತ್‌ಪೇಸ್ಟ್ ಬಗ್ಗೆ ಮಾಹಿತಿ ನೀಡುವ ತಾರೆ ಯಾರು?

✤ ಮುಸುರೆ ತೊಳೆಯಲು ಶಿಲ್ಪಾ ಶೆಟ್ಟಿ ಯಾವ ಡಿಶ್ ವಾಶ್ ಉಪಯೋಗಿಸುತ್ತಾಳೆ?

✤ ಧರ್ಮೇಂದ್ರನ ಮೊದಲನೆಯ ಹೆಂಡತಿಯ ಹೆಸರು ಗೊತ್ತೆ? ಅವನಿಗಲ್ಲ, ನಿಮಗೆ!

✤ ಮಾಧುರಿ ದೀಕ್ಷಿತ್ ತನ್ನ ಮಕ್ಕಳ ಆರೋಗ್ಯ ಕಾಪಾಡಿಕೊಳ್ಳಲು ಯಾವ ಲೇಹ್ಯ ಬಳಸುತ್ತಾಳೆ?

✤ ಉಪೇಂದ್ರ ಧರಿಸುವ ಚಪ್ಪಲಿ ಯಾವ ಬ್ರಾಂಡಿನದು?

✤ ದೀಪಿಕಾ ಪಡುಕೋಣೆ ಉಪಯೋಗಿಸುವ ಸೋಪಿನ ಹೆಸರು ತಿಳಿಸಿ.

✤ ರಮೇಶ್ ಅರವಿಂದ್ ತನ್ನ ಮನೆಯವರಿಗೆ ಬಟ್ಟೆ ಕೊಳ್ಳುವುದು ಎಲ್ಲಿ?

✤ ಶಾರುಖ್ ಖಾನ್ ದಿನಸಿ ಕೊಳ್ಳಲು ಯಾವ ಆಪ್ ಬಳಸುತ್ತಾನೆ?

✤ ಶರ್ಟ್‌ಲೆಸ್ ವಂಡರ್ ಎಂದರೆ ಯಾರು?

✤ ಬಾಬಾ ರಾಮದೇವ್ ಬಿಸ್ಕಟ್‌ಗಳನ್ನು ಶಿಫಾರಸ್ಸು ಮಾಡುತ್ತಿರುವ ತಾರೆ ಯಾರು?

✤ ಮೂರು ಇಂಟರ್ವಲ್ ಚಿತ್ರ ಬಿಡುಗಡೆಯಾದರೆ ನೀವು ಮೂರನೆ ಇಂಟರ್ವಲ್‌ನಲ್ಲಿ ಏನು ಮಾಡುವಿರಿ?

✤ ಪವರ್ ಹೀರೊ, ಆಕ್ಷ್ಯನ್ ಹೀರೊ, ಚಾಲೆಂಜಿಂಗ್ ಹೀರೋ ತರಹ ನೀವು ಯಾವ ತರಹದ ಹೀರೊ ಆಗಲು ಬಯಸುವಿರಿ (ಅವಕಾಶ ಸಿಕ್ಕರೆ)?

*(ನಿಮ್ಮ ಉತ್ತರಗಳು ಸರಿ ಇದ್ದರೆ 'ನಾನು ಜಾಣ' ಎಂದು ಬೆನ್ನು ತಟ್ಟಿಕೊಳ್ಳಬೇಕಿಲ್ಲ.)*

# Advertisement

# Advertisement

ಸಿನಿಮಾ ವಿಶೇಷ

# ಮೇಕು... ರೀಮೇಕು...

**- ವಿಶಾಖ ಎನ್.**

**ಒಂ**ದು ದೊಡ್ಡ ವಾಹನದ ಟೆಸ್ಟ್ ಡ್ರೈವ್‌ಗೆಂದು ಹೋಗಿಬಂದ ನೀಳಕಾಯದ ಸ್ಟೈಲಿಷ್ ನಟ ಪುರುಸೊತ್ತು ಮಾಡಿಕೊಳ್ಳುವುದು ಕಷ್ಟವಿತ್ತು. ಒಂದು ಕಡೆ ರಿಯಾಲಿಟಿ ಷೋ, ಇನ್ನೊಂದು ಕಡೆ ಪರಭಾಷಾ ಸಿನಿಮಾಗಳು, ನಡುವೆ ಆಗೀಗ ಕನ್ನಡ ಸಿನಿಮಾಗಳಲ್ಲಿ ನಟಿಸುವ, ನಿರ್ದೇಶಿಸುವ ಉಸಾಬರಿಯನ್ನು ಮೈಮೇಲೆ ಎಳೆದುಕೊಂಡವರು. ಅದೂ ರೀಮೇಕ್ ಸಿನಿಮಾ ಮಾಡಬೇಕು ಎಂದರೆ ಮೂಲ ಚಿತ್ರವನ್ನು ಕೂಲಂಕುಶವಾಗಿ ನೋಡಲೇಬೇಕಲ್ಲ. ಅದಕ್ಕೂ ಅವರಿಗೆ ಈಚೀಚೆಗೆ ಪುರುಸೊತ್ತು ಇರುವಂತೆ ಇಲ್ಲ. ಒಲ್ಲದ ಮನಸ್ಸಿನಿಂದಲೇ ಅವರು ಮಾತಿಗೆ ಕುಳಿತರು.

ನಿಮಗ್ಯಾಕೆ ರೀಮೇಕ್ ಮೋಹ?

ಕಟ್ಟಿರುವ ಮನೆಯನ್ನು ಅನುಕರಿಸಿ ಇನ್ನೊಂದು ಕಟ್ಟುವುದು ಸುಲಭವಲ್ಲ. ಎಲ್ಲವನ್ನೂ ನೀವು 'ನೀಟಾಗಿ' ನೋಡಬೇಕು. ಹಾಗೆಯೇ ರೀಮೇಕ್ ಸಿನಿಮಾ. ಮೊದಲೇ ಅದನ್ನು ಅನೇಕರು ನೋಡಿರುತ್ತಾರೆ. ಅಲ್ಲಿ ಇಲ್ಲದ ಏನನ್ನೋ ನಾವು ಕಡಿಮೆ ಬಜೆಟ್‌ನಲ್ಲಿ ಹೇಳಬೇಕಾಗುತ್ತದೆ. ಅದು ಸವಾಲು ಅಲ್ಲದೆ ಮತ್ತೇನು?

ಸೃಜನಶೀಲತೆಯ ವಿಷಯ ಬಂದಾಗ ನಿಮ್ಮ ಮಾತನ್ನು ಒಪ್ಪುವುದು ಹೇಗೆ?

ಪರೀಕ್ಷೆಯಲ್ಲಿ ಕಾಪಿ ಹೊಡೆಯುವುದೂ ಒಂದು ಕಲೆ. ಎಲ್ಲರಿಂದಲೂ ಅದು ಆಗದು. ನನ್ನ ಪ್ರಕಾರ ಅದು ಕೂಡ ಕ್ರಿಯೇಟಿವಿಟಿಯೇ.

ಬೇರೆ ಭಾಷೆಯಲ್ಲಿ ನೊಣದ ಕೈಲಿ ಚುಚ್ಚಿಸಿಕೊಳ್ಳಲು ಒಪ್ಪುವ ನೀವು ಇಲ್ಲಿ ಒಂದು ಒದೆ ತಿನ್ನಲೂ ಹಿಂದೆ ಮುಂದೆ ನೋಡುತ್ತೀರೆಂಬ ಅಭಿಪ್ರಾಯವಿದೆ. ಏನಂತೀರಿ?

ನೊಣ ಎಲ್ಲಿಯದು ಎನ್ನುವುದು ನನಗೆ ಮುಖ್ಯವಾಗುತ್ತದೆ. ಕರ್ನಾಟಕದ ಹುಳುಗಳು ನನ್ನನ್ನು ಏನೂ ಮಾಡಲಾಗದು ಎನ್ನುವ ನಂಬಿಕೆ ನನ್ನ ಅಭಿಮಾನಿಗಳಿಗೆ ಇದೆ. ಹಾಗಿರುವಾಗ ಇಲ್ಲಿನ ನೊಣಗಳ ಕೈಲಿ ಚುಚ್ಚಿಸಿಕೊಳ್ಳುವುದೇ?

ಅಲ್ಲಿ ನೊಣ ಚುಚ್ಚಿದ್ದನ್ನು ಇಲ್ಲಿಯ ಪ್ರೇಕ್ಷಕರೂ ನೋಡಿದರಲ್ಲವೇ?

ಅದು ಹಾಗಲ್ಲ. ಯಾವ ಭಾಷೆಯ ಸಿನಿಮಾದಲ್ಲಿ ನೊಣ ಚುಚ್ಚಿದೆ ಎನ್ನುವುದಷ್ಟೆ ಮುಖ್ಯ.

ಮುಂದೆ ಅದು ಕನ್ನಡಕ್ಕೆ ಡಬ್ ಆಗಿಬಿಟ್ಟರೆ?

ಹಾಗೆ ಆಗಲು ನಾನು ಬಿಡುವುದಿಲ್ಲ. ನನ್ನ ಅಭಿಮಾನಿಗಳು ಬಿಡುವುದಿಲ್ಲ.

ನಿಮ್ಮ ಕ್ರಿಕೆಟ್ ಪ್ರೀತಿಯನ್ನು ಮೆಚ್ಚಬೇಕು. ಆದರೆ, ವಿಕೆಟ್ ಕೀಪಿಂಗ್ ಮಾಡಲು ಯಾಕೆ ಅಷ್ಟು ಪರದಾಡುತ್ತೀರಿ?

ಕ್ಯಾಚ್ ಹಾಕುವುದು ಸುಲಭ ಅಲ್ಲ ಕಣ್ರೀ... ಅದು ಚೆಂಡೇ ಆಗಿರಬಹುದು, ರಿಮೇಕ್ ಹಕ್ಕೇ ಆಗಿರಬಹುದು. ಬಿಟ್ಟು ಬಿಟ್ಟು ಹಿಡಿಯುವುದು ಎಂದರೆ ಇದೇ.

ನಿಮ್ಮ ಸಂಸಾರದಲ್ಲಿ ಅಪಸ್ವರ ಕೇಳಿದ್ದಕ್ಕೂ ಸಿನಿಮಾ ಬದುಕಿಗೂ ಏನಾದರೂ ಸಂಬಂಧ ಇದೆಯಾ?

ನೆಕ್ಸ್ಟ್ ಕ್ವೆಶ್ಚನ್ ಪ್ಲೀಸ್...

ನಿಮಗೆ ಕೋಪ ಜಾಸ್ತಿ ಎಂದು ಆಪ್ತೇಷ್ಟರು ಹೇಳುತ್ತಾರೆ. ಅದನ್ನು ನಿಯಂತ್ರಣದಲ್ಲಿ ಇಡಲು ಯತ್ನಿಸಿದ್ದು ಉಂಟೇ?

(ಹಲ್ಲು ಕಡಿಯುತ್ತಾ... ಕಣ್ಣುಗಳನ್ನು ಅಗಲವಾಗಿಸಿ...) ಮನುಷ್ಯ ಅಂದಮೇಲೆ ಎಲ್ಲಾ ಇರುತ್ತೆ. ಹಾಗೆಯೇ ಕೋಪವೂ. ಕೋಪ ಬರಿಸುವುದು ನಿಮ್ಮ ಉದ್ದೇಶವಾ?

ಹೋಗಲಿ ಬಿಡಿ. ರಿಯಾಲಿಟಿ ಷೋ ಮನೆಯೊಳಗೆ ನೀವು ಸ್ಪರ್ಧಿಯಾಗಿ ಹೋದರೆ ಏನಾಗಬಹುದು?

ಆಫ್‌ಕೋರ್ಸ್, ನಾನು ಟಫ್ ಕಾಂಪಿಟೇಷನ್ ಅಂತೂ ಕೊಡ್ತೀನಿ. ಡೋಂಟ್ ಅಂಡರ್ ಎಸ್ಟಿಮೇಟ್ ದಿ ಪವರ್ ಆಫ್ ಎ ಸ್ಟಾರ್.

ರೀಮೇಕ್ ಸಿನಿಮಾ ಮಾಡುವಾಗ ನೀವು ತೆಗೆದುಕೊಳ್ಳುವ ಎಚ್ಚರಗಳಾವುವು?

ಮೂಲಕ್ಕೆ ಪೂರ್ತಿ ಲಾಯಲ್ ಆಗಿರುವುದು. ಇದು ಕಷ್ಟದ ವಿಷಯ. ಬೇರೆ ಭಾಷೆಯ ಹೀರೊ ಹಾವಭಾವ ಅನುಕರಿಸುವುದು ಸುಲಭವಲ್ಲ. ಮೇಕಪ್ ಮಾಡಿಕೊಳ್ಳುವುದು ಇನ್ನೊಂದು ಸವಾಲು. ಜೊತೆಗೆ ಅಲ್ಲಿ ಶೂಟ್ ಮಾಡಿರುವ ಲೊಕೇಷನ್‌ಗಳಿಗೆ ಮ್ಯಾಚ್ ಆಗುವಂಥ ಜಾಗಗಳನ್ನು ಹುಡುಕಬೇಕು. ಕದ್ದೂ ಕದಿಯದಂತೆ ಹಾಡುಗಳನ್ನು ಮಾಡಿಸಬೇಕು. ಅದೇ ರೀತಿ ಶಾಟ್‌ಗಳನ್ನು ಇಡಬೇಕು. ಎಲ್ಲಕ್ಕೂ ಮಿಗಿಲಾಗಿ ಮೂಲ ಸಿನಿಮಾಗಿಂತ ಕಡಿಮೆ ಬಜೆಟ್‌ನಲ್ಲಿ ಇಷ್ಟೆಲ್ಲವನ್ನೂ ಸಾಧಿಸಬೇಕು.

ನೀವು ನಾಯಕನಾಗುವ ರೀಮೇಕ್ ಸಿನಿಮಾದ ಬಜೆಟ್ ಹೆಚ್ಚಾಗುತ್ತಿದೆ ಎಂಬ ಆರೋಪ ಇದೆಯಲ್ಲ?

ಈ ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಬೆಲೆ ಇದೆ. ನನ್ನ ಬೆಲೆ ಏನು ಎಂದು ನನಗೆ ಗೊತ್ತು. ತಾಕತ್ತಿರುವ ನಿರ್ಮಾಪಕರು ಮುಂದೆ ಬರಲಿ. ಬರೀ ರೀಮೇಕ್ ರೀಮೇಕ್ ಅಂತೀರಲ್ಲ, ಬೇರೆ ಏನೂ ನಿಮ್ಮ ಕಣ್ಣಿಗೆ ಕಾಣೋದೇ ಇಲ್ಲವೇ?

ನಿಮ್ಮ ಬಿರುದಿನ ವಿಷಯಕ್ಕೆ ಬರೋಣ. ಅದರ ಅರ್ಥ ಏನು?

ಕಿಚ್ಚು ಇರುವವನು ಎಂದುಕೊಳ್ಳಿ. ಅಭಿಮಾನಿಗಳು ಪ್ರೀತಿಯಿಂದ ಕೊಟ್ಟಿದ್ದನ್ನು ಇಟ್ಟುಕೊಳ್ಳುವುದಷ್ಟೇ ನಮ್ಮ ಕೆಲಸ.

ಆ ಬಿರುದನ್ನು ನಿಮಗೆ ನೀಡಿದ ಅಭಿಮಾನಿಯ ಹೆಸರೇನು?

ದಿಸ್ ಈಸ್ ಟೂ ಮಚ್...

ಕನ್ನಡ ಚಿತ್ರರಂಗದ ಈಗಿನ ಮುಂದಾಳತ್ವ ವಹಿಸುವ ಅರ್ಹತೆ ನಿಮಗೆ ಇದೆ ಎನಿಸುತ್ತದಾ?

ನನಗೆ ಅದಕ್ಕೆಲ್ಲಾ ಬಿಡುವಿಲ್ಲ. ಐ ಹ್ಯಾವ್ ಮೈ ಓನ್ ಬಿಸಿನೆಸ್, ಡ್ರೀಮ್ಸ್, ಪ್ರಾಜೆಕ್ಟ್ಸ್.

ಕನ್ನಡ ಚಿತ್ರರಂಗದ ಸಹವಾಸವೇ ಸಾಕು ಎಂದು ಇತ್ತೀಚೆಗೆ ನೀವು ನೊಂದು ನುಡಿದಿದ್ದೀರಿ. ಯಾಕೆ?

ಈ ರೀತಿಯ ಪ್ರಶ್ನೆಗಳನ್ನು ಕೇಳುವವರು ಹೆಚ್ಚಾದರೆ ಇನ್ನೇನು ಮಾಡೋದು (ಕುಹಕ ನಗು).

ಲಾಸ್ಟ್ ಕ್ವೆಶ್ಚನ್ ಪ್ಲೀಸ್...

ರೀಮೇಕ್ ನಿಷೇಧಿಸಿಬಿಟ್ಟರೆ ನೀವು ಏನು ಮಾಡುತ್ತೀರಿ?

ದೇರ್ ಆರ್ ಅದರ್ ವೇಸ್. ಕಾಂಟ್ ಎಕ್ಸ್‌ಪ್ಲೇನ್.

---

## ಐಟಿ ಹೈಕ್ಳು ಸಿನಿಮಾ ತೆಗೆದರೆ...

**ಆವೊ ಪ್ಯಾರ್ ಕರೆ** – ಆವೊ ಚಾಟ್ ಕರೆ

**ಕೂಲಿ ನಂ 1** – ಪ್ರೊಗ್ರಾಮರ್ ನಂ 1

**ಮೇರಾ ನಾಮ್ ಜೋಕರ್** – ಮೇರಾ ನಾಮ್ ಡೆವಲಪರ್

**ಜಿಸ್ ದೇಶ್ ಮೆ ಗಂಗಾ ಬಹ್ತಿ ಹೈ** – ಜಿಸ್ ದೇಶ್ ಮೆ ಬಿಲ್ (ಗೇಟ್ಸ್) ರಹ್ತಾ ಹೈ

**1942 ಲವ್ ಸ್ಟೋರಿ** – 19442 ಎ ಬಗ್ ಸ್ಟೋರಿ

**ಪ್ಯಾರ್ ಕರೊ ಸಜನಾ** – ಲಾಗ್ ಇನ್ ಕರೊ ಸಜನಾ

**ಮಿಷನ್ ಕಾಶ್ಮೀರ್** – ಮಿಷನ್ ವೈರಸ್

**ಲಗಾನ್** – ಲಾಗ್ ಆನ್

**ಕಂಪನಿ** – ಡಾಟ್ ಕಂಪನಿ

**ಮಿ ನಟವರ್ ಲಾಲ್** – ಮಿ ನೆಟ್‌ವರ್ಕ್ ಲಾಲ್

**ದೊ ಆಂಖೆ ಬಾರಾ ಹಾತ್** – ದೊ ಪ್ರೊಸೆಸರ್ ಬಾರಾ ಟರ್ಮಿನಲ್

**ಕೊಯಾಮತ್ ಸೆ ಕೊಯಾಮತ್ ತಕ್** – ಕ್ರಾಶ್ ಸೆ ಕ್ರಾಶ್ ತಕ್

# ಚಿತ್ರ ವಿಮರ್ಶೆ

**– ಸಿ.ಆರ್. ಸತ್ಯ**

**ರೇ**ಟಿಂಗ್:

½★ : ಇನ್ಯಾರಾದರೂ ನಿಮಗೆ ಟಿಕೆಟ್ಟನ್ನು ತೆಗೆದುಕೊಟ್ಟರೆ, ಈ ಚಿತ್ರ ನೋಡಿ. ಇಲ್ಲದಿದ್ದರೆ, ಇದರ ಕಡೆ ಕಣ್ಣೂ ಹಾಯಿಸಬೇಡಿ.

★ : ನೋಡಬಹುದು. ಆದರೆ ನಿಮಗೆ ಬಿ.ಪಿ., ಶುಗರ್ ತೊಂದರೆ ಇದ್ದರೆ ಮನೆಯಲ್ಲಿ ಇರುವುದೇ ವಾಸಿ.

★★ : ಗಾಂಧಿಕ್ಲಾಸ್ನಲ್ಲಿ ಕೂತು ನೋಡಬಹುದು. ನಿಮಗೆ ಶಿಳ್ಳೆ ಹೊಡೆಯೋಕ್ಕೆ ಬಂದರೆ ಇನ್ನೂ ಉತ್ತಮ.

★★★ : ನೀವೇ ದುಡ್ಡು ಕೊಟ್ಟು ನೋಡಬಹುದು. ಕೈನಲ್ಲಿ ಪಾಪ್‌ಕಾರ್ನ್ ಪ್ಯಾಕೆಟ್ ಇದ್ದರೆ ಬೋರ್ ಆದಾಗ ಅನುಕೂಲಕ್ಕೆ ಬರುತ್ತೆ.

★★★★ : ಒಳ್ಳೇ ಸಿನಿಮಾ ಅಥವಾ ''ಆರ್ಟ್'' ಸಿನಿಮಾ ಅನ್ನಬಹುದು. ಆದ್ದರಿಂದ ಅಡ್ವಾನ್ಸ್ಡ್ ಬುಕಿಂಗ್ ಬೇಡ. ರಿಲೀಸ್ ಆದ ತಕ್ಷಣ ನೋಡಿ. ಮೂರು ದಿನಗಳ ನಂತರ ಓಡೋಲ್ಲ.

---

## ಮದ್ದೂರು ವಡೆ:

ನಿರ್ಮಾಪಕರು : ವಡಾನೀಸ್ ಕಂಬೈನ್ಸ್, ಮದ್ದೂರು.

ನಟವರ್ಗ : ಮಸ್ಕಿಟೋ ಮಂಜು, ಜಾಜಿ ಜಲಜಾ, ಬೈಟೂ ಭಾಸ್ಕರ್, ಕೋಡಿಗೇಹಳ್ಳಿ ಕಿಟ್ಟಿ, ಇತರೆ ಎಕ್ಸ್‌ಟ್ರಾಗಳು.

ಸಂಗೀತ : ಕಾಪೀ ಕೆಂಪಣ್ಣ.

ನಿರ್ದೇಶನ : ಯಾರೂ ಮಾಡಿದ ಹಾಗೆ ಇಲ್ಲ.

ಬೆಂಗಳೂರು ಬ್ಯೂಟಿ ಸುಪ್ರಿಯಾ (ಜಾಜಿ ಜಲಜ) ತನ್ನ ಕಾರಿನಲ್ಲಿ ಮೈಸೂರಿಗೆ ಹೋಗ್ತಾ ಮದ್ದೂರಿನಲ್ಲಿ ಹೋಟೆಲ್ಗೆ ಹೋಗಿ ಒಂದು ಮದ್ದೂರು ವಡೆ ಆರ್ಡರ್ ಮಾಡ್ತಾಳೆ. ಅವಳ ಹಿಂದೆ, ಹೀರೋ ಜಗನ್ (ಮಸ್ಕಿಟೋ ಮಂಜು) ಕೂಡಾ ತನ್ನ ಪಲ್ಸಾರ್ ಮೋಬೈಕ್ ಮೇಲೆ ಫಾಲೋ ಮಾಡ್ಕೊಂಡು ಬಂದು, ಅದೇ ಹೋಟೆಲ್ನಲ್ಲಿ ಸುಪ್ರಿಯಾ ಮುಂದಿನ ಟೇಬಲ್ನಲ್ಲಿ ಕೂತು ಡಬ್ಬಲ್ ಮದ್ದೂರು ವಡೆಗಳನ್ನ ಆರ್ಡರ್ ಮಾಡ್ತಾನೆ. ಇದೇ ಸಮಯಕ್ಕೆ ಮೈಸೂರಿನಲ್ಲಿ ಕುದುರೆ ರೇಸ್ ಮುಗಿಸಿಕೊಂಡು, ವಾಪಸ್ ಬರ್ತಿರೋ ಉದ್ಯಮಿ ರಾಜ್ (ಬೈಟೂ ಭಾಸ್ಕರ್), ಸುಪ್ರಿಯಾ ಪಕ್ಕದ ಟೇಬಲ್ನಲ್ಲಿ ಕೂತು, ನಾಲ್ಕು ಮದ್ದೂರು ವಡೆಗಳನ್ನ ಆರ್ಡರ್ ಮಾಡ್ತಾನೆ. ಈ ವಡೆ ಪೈಪೋಟಿ ಶುರುವಾದಾಗ,

ತ್ರಿಕೋಣಾಕಾರದ ರೀತಿಯಲ್ಲಿ, ಈ ಮೂವರ ಮಧ್ಯೆ ಲವ್ ಗಲಾಟೆ ಬಡಿಯುತ್ತೆ ಅಂತ ಪ್ರೇಕ್ಷಕರಿಗೆ ಆಗಲೇ ಗೊತ್ತಾಗುತ್ತೆ. ಇದ್ದಕ್ಕಿದ್ದ ಹಾಗೆ ಜಗನ್ ಎದ್ದು ಡಾರ್ಕ್ ಗ್ಲಾಸಸ್ನ ಟೇಬಲ್ ಮೇಲೆ ಕುಕ್ಕಿ, ಕೈನಲ್ಲಿ ಒಂದು ಮದ್ದೂರು ವಡೇನೇ ಹೂವಿನ ತರಹ ಹಿಡಿದುಕೊಂಡು, ''ಐ ಲವ್ ಯೂ ಸುಪ್ರಿಯಾ, ಜಸ್ಟ್ ಲೈಕ್ ಐ ಲವ್ ದಿಸ್ ಮದ್ದೂರು ವಡೆ'' ಅಂತಾನೆ. ಆಗ ರಾಜ್ (ಅವನಿಗೆ ಜಗನ್ನ ಪರಿಚಯ ಇರುತ್ತಂತೆ) ತನ್ನ ಡಾರ್ಕ್ ಗ್ಲಾಸಸ್ನ ರೊಯ್ಯ್ ಅಂತ ಹೋಟೆಲ್ ಮಾಣಿ ಮೇಲೇ ಎಸೆದು ''ಸುಳ್ಳು, ಅವನನ್ನು ನಂಬಬೇಡ. ಅವನಿಗೆ ಮದ್ದೂರು ವಡೆ ಅಂದರೆ ಅಲರ್ಜಿ. ನಿನ್ನ ಮೇಲೂ ಅವನಿಗೆ ಅಲರ್ಜಿ ಬರುತ್ತೇ!'' ಅಂತ ಹಾಡಿಗೆ ಇಳೀತಾನೆ. ಹೋಟೆಲ್ ಮಾಲೀಕ, ಮಾಣಿಗಳು, ಮಿಕ್ಕ ಗಿರಾಕಿಗಳೆಲ್ಲರೂ ಈ ಹಾಡಿಗೆ ಕುಣೀತಾರೆ. ಚಟ್ನೀ ಎಲ್ಲಾ ಅಲ್ಲೀ ಇಲ್ಲೀ ಚೆಲ್ಲುತ್ತೆ. ವಡೆಗಳೆಲ್ಲಾ ಫ್ಲೈಯಿಂಗ್ ಸಾಸರ್‌ಗಳ ಹಾಗೆ ಪಾರ್ಕಿಂಗ್ ಲಾಟ್ ತನಕ ಹಾರುತ್ವೆ. ಜಗನ್ ಮತ್ತು ರಾಜ್ ಮಧ್ಯೆ ಫೈಟಿಂಗ್ ಶುರು ಆಗುತ್ತೆ. ಈ ಮಧ್ಯೆ, ಮಾಣಿ (ಕೋಡಿಗೇಹಳ್ಳಿ ಕಿಟ್ಟಿ) ಶಾರ್ಟ್ ಪ್ಯಾಂಟ್ ಹಾಕ್ಕೊಂಡಿರೋ ಸುಪ್ರಿಯಾ ಮಂಡಿ ಮೇಲೆ ಬಿಸಿ ಕಾಫಿ ಚೆಲ್ತಾನೆ...

ಕಥೆ, ವಿಮರ್ಶೆ ಇಲ್ಲಿಗೇ ಸಾಕು ಬಿಡಿ.

ರೇಟಿಂಗ್: ½★

---

## ತುಮಕೂರು ತಂಗಿ:

ನಿರ್ಮಾಪಕರು : ಕಣ್ಣೀರ್ ಪ್ರೊಡಕ್ಷನ್ಸ್.

ನಟವರ್ಗ : ಮಾಗಡಿ ಮುರುಗೇಶ್, ಚಿಂತಾಮಣಿ ಚಿತ್ರ, ಗಗನಚುಕ್ಕಿ ಗಂಗು, ಭರಚುಕ್ಕಿ ಬಾಬು ಇತ್ಯಾದಿ.

ಸಂಗೀತ : ಒರಿಜಿನಲ್: ಬಿಸ್ಮಿಲ್ಲಾ ಖಾನ್; ಕಾಪಿ: ಶಹನಾಯ್ ಶಂಕ್ರು

ನಿರ್ದೇಶನ : ಕಣ್ಣೀರ್ ಕಣ್ಣನ್

ಇದು ಕಣ್ಣೀರ್ ಕಣ್ಣನ್ ಅವರ ಐವತ್ತನೆಯ ಫ್ಯಾಮಿಲಿ ಚಿತ್ರ. ಪ್ರೇಕ್ಷಕರು ಕೈನಲ್ಲಿ ಒಂದು ಟರ್ಕಿ ಟವಲ್ ಇಟ್ಕೊಂಡು, ಎರಡು ಗಂಟೆಗಳ ಕಾಲ ಧಾರಾಳವಾಗಿ ಅಳಬಹುದು.

ತಂದೆ ತಾಯಿ ಇಲ್ಲದ ಸಂತೋಷ್‌ಗೆ (ಮಾಗಡಿ ಮುರುಗೇಶ್) ತನ್ನ ಊರಿನ ಹಿರಿಯರಾದ ಕಿಟ್ಟಪ್ಪ ಮೇಷ್ಟ್ರಿಂದ (ಭರಚುಕ್ಕಿ ಬಾಬು) ತನಗೆ ಚಿಕ್ಕ ತಂಗಿ ಒಬ್ಬಳು ಇದ್ದಳೆಂದೂ, ಆದರೆ ಚಿಕ್ಕ ವಯಸ್ಸಿನಲ್ಲೇ ಅವಳನ್ನು ಅವನ ವಿಧವೆ ಅಮ್ಮ ತುಮಕೂರಿನ ಯಾವುದೋ ಸಾಹುಕಾರರ ಮನೆಯಲ್ಲಿ ಬಿಟ್ಟು ಸತ್ತು ಹೋದಳೆಂದೂ ಗೊತ್ತಾಗುತ್ತೆ. ಈ ಸಮಯದಲ್ಲೇ ಹಿನ್ನಲೆಯಲ್ಲಿ ಶಹನಾಯ್ ವಾದನ ಕೇಳೋದು. ಸರಿ, ಕಳೆದು ಹೋದ ತಂಗಿಯನ್ನ ಹುಡುಕೋದೇ ಚಿತ್ರದ ಮೂಲ ಕಥೆ. ಸಂತೋಷ್ ತಂಗಿಯನ್ನು ಹುಡುಕಲೇಬೇಕೆಂಬ ಛಲದಿಂದಾಗಿ ತುಮಕೂರಿಗೆ ಬರ್ತಾನೆ. ತುಮಕೂರಿನ

ಹೈಸ್ಕೂಲುಗಳಲ್ಲೆಲ್ಲಾ, ಕಾಲೇಜ್ಗಳಲ್ಲೆಲ್ಲಾ ಹುಡುಕ್ತಾನೆ. ಇವನು ಹುಡುಗೀರ ಹಿಂದೆ ಬಿದ್ದಿದ್ದಾನೆ ಅಂತ ತುಮಕೂರು ಪೋಲಿಸಿನವರೂ, ಚಿತ್ರದ ವಿಲ್ಲನ್ ಲೋಕಲ್ ರೌಡಿ ಮಚ್ಚ (ಗಗನಚುಕ್ಕಿ ಗಂಗು) ಇವನ ಹಿಂದೆ ಬೀಳ್ತಾರೆ. ಫೈಟಿಂಗ್, ಲಾಕಪ್‌ಗಳ ಮಧ್ಯೇನೆ, ಸಂತೋಷ್ ಕಣ್ಣಿಗೆ ಕಾಲೇಜ್ ಹುಡುಗಿ ಕೋಕಿಲ (ಚಿಂತಾಮಣಿ ಚಿತ್ರ) ಬೀಳ್ತಾಳೆ. ರೌಡಿ ಮಚ್ಚ ಅವಳನ್ನ ಪ್ರೀತಿಸ್ತಿದಾನೆ ಅಂತಾಲೂ ತಿಳ್ಕೋತಾನೆ. ಆದರೆ ಅವಳು ತನ್ನ ತಂಗೀನೇ, ಅಲ್ಲವೇ ಅಂತಲೂ ಸಂತೋಷ್‌ಗೆ ಅನುಮಾನ ಬರುತ್ತೆ. ಡೈರೆಕ್ಟರ್ ಲವ್ ಸೀನ್‌ಗಳನ್ನ, ಫೈಟಿಂಗ್ ಸೀನ್‌ಗಳನ್ನ ಬೆಂಗಳೂರು–ತುಮಕೂರು ಹೈವೇ ಇಂದ ಹಿಡಿದು ದೇವರಾಯನ ದುರ್ಗದವರೆಗೆ ಹಿಡಿದಿರೋದು ಗಮನಾರ್ಹ. ಕೋಕಿಲಳಿಗೆ ವಿಷಯ ಅರ್ಥಂಬರ್ಥ ಅರ್ಥವಾಗಿ ತನ್ನ ಸಾಕು ತಾಯಿ ಜೊತೆ ಅಳೋದು ಎಷ್ಟು ಮನಸ್ಸನ್ನು ಕಲಕುತ್ತೆ ಅಂದರೆ, ಪ್ರೇಕ್ಷಕರು, ಗೇಟ್ ಕೀಪರ್ರು, ಈ ವಿಮರ್ಶಕನೂ ಸೇರಿ, ಕಣ್ಣೀರನ್ನು ಸುರಿಸಿದ್ದಂತೂ ನಿಜ. ಛಾಯಾಗ್ರಹಣದಲ್ಲಿ ಕೆಲವು ತಾಂತ್ರಿಕ ದೋಷಗಳಿವೆ. ಉದಾಹರಣೆಗೆ, ಒಂದು ದೃಶ್ಯದಲ್ಲಿ ತುಮಕೂರಿನ ಬಸ್ ಸ್ಟ್ಯಾಂಡ್‌ನಲ್ಲಿ ನಿಂತಿರೋ ಜನರೆಲ್ಲರೂ ತೀರ ಕಪ್ಪಗೆ ಆಫ್ರಿಕಾದವರ ತರಹ ಕಾಣಿಸ್ತಾರೆ. ಇದರಿಂದ ಮೊದಲನೇ ಪ್ರದರ್ಶನ ಆಗುತ್ತಿದ್ದಾಗ, ಜನ ಕಲ್ಲು ತೂರಿದ್ದು, ಈ ವಿಮರ್ಶಕನಿಗೂ ಪೆಟ್ಟು ಬಿತ್ತು. ಕಿಟ್ಟಪ್ಪ ಮೇಷ್ಟ್ರು ಕಣ್ಣೀರು ಹಾಕಿದಾಗ, ಒಂದೇ ಕಣ್ಣಲ್ಲಿ ನೀರು ಕಾಣಿಸ್ತಿದ್ದುದು ಅಸಂಭವ ಅನ್ನಿಸ್ತು. ಕೋಕಿಲ ಯಾರು ಅನ್ನೋದನ್ನ ನೀವೇ ಕೊನೆಯಲ್ಲಿ ನೋಡಿ. ಒಟ್ಟಿನಲ್ಲಿ ಬೇರೇ ಇನ್ಯಾವ ಕೆಲಸವೂ ಇಲ್ಲದಿದ್ದರೆ ಫ್ಯಾಮಿಲಿ ಜೊತೆಗೆ ನೋಡೋ ಅಂತ ಚಿತ್ರ ಅನ್ನಬಹುದು.

ರೇಟಿಂಗ್: ★

---

## ಕರುನಾಡ ಬಾಂಡ್ 009:

ನಿರ್ಮಾಪಕರು : ತ್ರಿಲ್ ಎಂಡ್ ತ್ರಿಲ್ ಎಂಟರ್ ಪ್ರೈಸಸ್.

ನಟವರ್ಗ : ಕಿಸ್ಸಿಂಗ್ ಕಿಂಗ್ ಕಾಮೇಶ್, ಮಂಗಳೂರು ಮಾರ್ಟಿನ್, ಮೀಸೆ ಮಾರಿಯಣ್ಣ, ಮೇರಿ, ಬೀರಿ, ಡಾಲಿ, ಜೋಲಿ, ಜೂಲಿ ಎಕ್ಸ್‌ಟ್ರಾ.

ಸಂಗೀತ : ಜೇಮ್ಸ್ ಬಾಂಡ್ ಚಿತ್ರದಿಂದ ಕಾಪಿ.

ನಿರ್ದೇಶನ : ಕ್ರೈಮ್‌ಕಿಂಗ್ ಕಾಂತರಾಜ್.

ಕನ್ನಡದಲ್ಲೇ ಜೇಮ್ಸ್ ಬಾಂಡ್ ನೋಡುವ ಸುಯೋಗವನ್ನು ಕ್ರೈಮ್‌ಕಿಂಗ್ ಕಾಂತರಾಜ್ ಈಗ ಪ್ರೇಕ್ಷಕರಿಗೆ ಕೊಟ್ಟಿದ್ದಾರೆ ಅನ್ನಬಹುದು. ವಿಧಾನ ಸೌಧದ ಕಳಶದ ಕೆಳಗೆ ಉಗ್ರರು ಬಾಂಬ್ ಇಟ್ಟಿದ್ದಾರೆ ಅಂತ ಬೆಂಗಳೂರು ಪೋಲೀಸ್ ಕಮೀಶನರ್‌ಗೆ (ಇವರು ಲೇಡಿ ಬೇರೆ–ಮೇರಿ ಈ ಪಾತ್ರದಲ್ಲಿ) ಫೋನ್ ಬಂದಾಗ, ಅವರ ಆದೇಶದಂತೆ, ಮುತ್ತತ್ತಿಯಲ್ಲಿ ಪ್ರೇಯಸಿಯ (ಡಾಲಿ) ಜೊತೆಗೆ ಪಿಕ್ನಿಕ್‌ನಲ್ಲಿ ವಿಹರಿಸುತ್ತಿದ್ದರೂ, ಕರುನಾಡ ಬಾಂಡ್ 009, ಸುಧೀರ್ (ಕಿಸ್ಸಿಂಗ್ ಕಿಂಗ್ ಕಾಮೇಶ್) ತಕ್ಷಣವೇ ಬೆಂಗಳೂರಿಗೆ ಬರ್ತಾನೆ.

ಕನಕಪುರ ರಸ್ತೆಯಲ್ಲಿ ಎಂದಿನಂತೆ ಟ್ರಾಫಿಕ್ ಜಾಮ್ ಇದ್ದರೂ ಅವನು ಪೋಲೀಸ್ ಕಮೀಶನರ್ ಆಫೀಸ್‌ಗೆ ಮುತ್ತತ್ತಿಯಿಂದ ಕೇವಲ ಹತ್ತು ನಿಮಿಷಗಳಲ್ಲೇ ಬರೋ ಓಪನಿಂಗ್ ಸೀನ್ ಮೈ ನವಿರೇಳಿಸುತ್ತದೆ. ಸರಿ, ಇವನ ಆಪರೇಶನ್‌ಗೆ ಸ್ಪೆಷಲ್ ಕಾರ್ ಬೇಡವೇ? ಶಿವಾಜಿನಗರದಲ್ಲಿ, ಜೆ.ಸಿ. ರೋಡ್‌ನಲ್ಲಿ ಈ ಸ್ಪೆಷಲ್ ಕಾರೂ ತಯಾರಾಗುತ್ತೆ.

ಸುಧೀರ್ ಡ್ರೈವ್ ಮಾಡೋವಾಗ ಸ್ವಿಚ್‌ಗಳನ್ನ ಹಾಕಿದ್ರೆ ಸಾಕು, ಸೈಲೆನ್ಸರ್‌ನಿಂದ ಟಿಯರ್ ಗ್ಯಾಸ್, ರೇಡಿಯೇಟರ್‌ನಿಂದ ಬುಲೆಟ್‌ಗಳು, ಹೆಡ್ಲ್ಯಾಂಪ್‌ನಿಂದ ಬೆಂಕಿ, ಹಾರನ್‌ನಿಂದ ಲೇಸರ್ ಇವೆಲ್ಲಾ ಬರುತ್ವೆ. ಆದರೆ, ಪೋಲೀಸ್ ಕಮೀಷನರ್ ಆಫೀಸ್‌ನಿಂದ ವಿಧಾನ ಸೌಧಕ್ಕೆ ಹೋಗೋದಕ್ಕೇ ಉಗ್ರರು (ಮಂಗಳೂರ್ ಮಾರ್ಟಿನ್, ಮೀಸೆ ಮಾರಿಯಣ್ಣ) ನಾನಾ ಬಗೆಯ ಅಡ್ಡ ಹಾಕ್ತಾರೆ, ಲಲನೆಯರನ್ನ ಸುಧೀರ್‌ಗೆ ಮುತ್ತಿಗೆ ಹಾಕಿಸ್ತಾರೆ. ಆದರೆ, ನಮ್ಮ ಬಾಂಡ್ ಕೆಲವು ಉಗ್ರರನ್ನೆಲ್ಲಾ ಆಕಾಶವಾಣಿ ಗೇಟ್ ಮುಂದೆಯೇ ಮುಗಿಸಿ, ಲಲನೆಯರಿಗೆಲ್ಲಾ ಸಾವಧಾನವಾಗಿ ಮುತ್ತು ಕೊಟ್ಟು (ಒಂದೊಂದು ಮುತ್ತೂ ಎರಡು ನಿಮಿಷಗಳು ಹಿಡಿದರೂ ಸೆನ್ಸಾರ್ ಇವಕ್ಕೆ ಕತ್ತರಿ ಹಾಕದೇ ಬಿಟ್ಟಿರೋದು ಈ ಚಿತ್ರದ ವೈಶಿಷ್ಟ್ಯ) ವಿಧಾನಸೌಧದ ಮುಂದೆ ಬರ್ತಾನೆ. ಈಗ ಪರಿಸ್ಥಿತಿ ಕೆಡುತ್ತೆ. ಉಗ್ರರು ವಿಧಾನ ಸೌಧದ ಒಳಗೆ ಮಂತ್ರಿಗಳನ್ನೆಲ್ಲಾ ಒತ್ತೆಯಾಗಿಟ್ಟುಕೊಂಡಿರುತ್ತಾರೆ, ಜೊತೆಗೆ ಅವನ ಮುತ್ತತ್ತಿ ಪ್ರೇಯಸಿ ಕೂಡ ಸೆಂಟ್ರಲ್ ಹಾಲ್‌ನಲ್ಲಿ ಉಗ್ರರ ಕೈನಲ್ಲಿ ಸಿಕ್ಕೊಂಡಿದ್ದಾಳೆ ಅಂತ ಸುಧೀರ್‌ಗೆ ಮೊಬೈಲ್ ಸುದ್ದಿ ಅವನ ಗಡಿಯಾರದ ಮೂಲಕ ಬರುತ್ತೆ. ಅಲ್ಲದೆ ''ಸರ್ಕಾರದ ಕೆಲಸ ದೇವರ ಕೆಲಸ'' ಬೋರ್ಡ್ ಕೆಳಗೆ ಒಂದು ಉಗ್ರರ ಸಾಲೇ ಇವನಿಗೆ ಕಾಯ್ತಿರುತ್ತೆ. ಈಗಲೇ ಸಿನಿಮಾದ ಕ್ಲೈಮಾಕ್ಸ್! ನಮ್ಮ ಬಾಂಡ್ ಹೇಗೆ ಮಂತ್ರಿಗಳನ್ನ ರಕ್ಷಿಸಿ ಏ.ಜಿ. ಆಫೀಸ್‌ನಲ್ಲಿ ಕೂಡಿಹಾಕ್ತಾನೆ, ಹೇಗೆ ಡೋಮ್ ಏರಿ ಕಳಶದ ಕೆಳಗಿರೋ ಬಾಂಬ್‌ನ ನಿಷ್ಕ್ರಿಯ ಮಾಡ್ತಾನೆ, ಹೇಗೆ ಮುತ್ತತ್ತಿ ಪ್ರೇಯಸಿಯನ್ನ ವಿಧಾನ ಸೌಧದ ಕ್ಯಾಂಟೀನ್ ಮೂಲಕ ಹೊರಗೆ ಕರೆದುಕೊಂಡು ಬರ್ತಾನೆ, ಹೇಗೆ ಮಾರನೇ ದಿನ ಅವನ ಶೌರ್ಯವನ್ನ ಮೆಚ್ಚಿ, ಮುಖ್ಯಮಂತ್ರಿ ಚಿನ್ನದ ಪದಕ ಕೊಡುವ ವೇಳೆ ಯಾರಿಗೂ ತಿಳಿಯದೆ ಮತ್ತೊಮ್ಮೆ ಪ್ರೇಯಸಿಯೊಂದಿಗೆ ಮುತ್ತತ್ತಿಗೆ ಬರುತ್ತಾನೆ, ಹೇಗೆ.... ಹೋಗಲಿ ಬಿಡಿ, ಇವೆಲ್ಲಾ ನೀವು ಪರದೆಮೇಲೆ ನೋಡಬೇಕಾದ್ದು. ಕ್ಯಾಮರಾ ವರ್ಕ್ ಚೆನ್ನಾಗಿದೆ. ರಸ್ತೆಯಲ್ಲಿ ಅಷ್ಟೊಂದು ಪಾಟ್ ಹೋಲ್ಸ್‌ಗಳಿದ್ದರೂ, ಸುಧೀರ್ ವಾಹನ ಹೋಗೋ ಸ್ಪೀಡ್‌ನ ಚಿತ್ರಣ, ಹೈಕೋರ್ಟ್ ಮುಂದೆ ಸೌತೇಕಾಯಿ ಗಾಡಿ, ಚಾಟ್ ಗಾಡಿ ಉಲ್ಟಾ ಪಲ್ಟಾ ಆಗೋ ಸೀನ್, ಬಾಂಡ್‌ನ ಎಂಟ್ರಿ ಪಾಸ್ ಎಲ್ಲಿ ಅಂತ ವಿಧಾನ ಸೌಧ ಸೆಕ್ಯುರಿಟಿ ಕೇಳೋ ದೃಶ್ಯ ಎಲ್ಲವೂ ಮಜಾ ಕೊಡುತ್ತೆ.

ಸಂಗೀತ ಒರಿಜಿನಲ್ ಬಾಂಡ್ ಮೂವಿ ಕಾಪಿ ಆದ್ದರಿಂದ, ಕೇಳಬಹುದು. ಕೊಟ್ಟ ದುಡ್ಡಿಗೆ ಮೋಸವಿಲ್ಲ ಅನ್ನಬಹುದಾದ ಚಿತ್ರ.

ರೇಟಿಂಗ್: ★★

ಸಿನಿಮಾ ವಿಶೇಷ

# ಸಿನಿಮಾ ಎಂಬ ಮೋಹ ಮಾಯೆ!

**- ಚಿತ್ರಾ ರಾಮಚಂದ್ರನ್**

**ತಾ**ತನ ಹದಿನಾರು ಕಂಭದ ತೊಟ್ಟಿ ಮನೆಯಲ್ಲಿ ಅಂದು ಎಲ್ಲಿಲ್ಲದ ಸಂಭ್ರಮ! ವಿಶಾಲವಾದ ಅಡುಗೆಮನೆಯ ಗೋಡೆಯುದ್ದಕ್ಕೂ ನಿರ್ಮಿಸಲ್ಪಟ್ಟಿದ್ದ ಸಾಲು ಒಲೆಗಳ ಮೇಲೆ ತಿಂಡಿ ತಿನಸುಗಳು ತಯಾರಾಗುತ್ತಿದ್ದವು.

''ನಾಗು! ಬೇಗನೆ ಎಲ್ಲ ತಯಾರು ಮಾಡಿ ಡಬ್ಬಿಗೆ ಹಾಕಿಡು! ಹೊತ್ತಾಗ್ತಿದೆ! ಬೇಗ! ಬೇಗ! ಆಮೇಲೆ ಮರೀದೆ ರೈಲ್ ಚೊಂಬಿಗೆ ನೀರು ತುಂಬಿಡು. ಕಡ್ಲೇಕಾಯಿ ಮಿಠಾಯಿ, ಕೊಬ್ರಿ ಮಿಠಾಯಿ, ಚಕ್ಲಿ ಪೊಟ್ಣಗಳನ್ನ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಕಟ್ಟಿಡು. ಮಕ್ಳು ಕಿತ್ತಾಡದೇ ತಿನ್ನುತ್ತಾರೆ! ಬೇಗ ಆಗ್ಲಿ!''

''ಲೋ ರಂಗ!'' ಅಜ್ಜಿ ರಂಗನನ್ನು ಕರೆದು ಸಾಮಾನುಗಳನ್ನು ಜೋಪಾನವಾಗಿ ಗಾಡಿಯಲ್ಲಿಡುವಂತೆ ಎಚ್ಚರಿಸಿದಳು. ಬಹಳ ಮುತವರ್ಜಿಯಿಂದ ಅಷ್ಟಾವಧಾನ ಮಾಡುತ್ತ ನಮ್ಮನ್ನೂ ಬೇಗ ಹೊರಡುವಂತೆ ತ್ವರೆಪಡಿಸಿದಳು.

ಅಮ್ಮ, ಮಾವನ ಮಡದಿ, ತಾತನ ತಂಗಿ, ಅವರ ಮಗಳು, ಮೊಮ್ಮಕ್ಕಳು, ನಾನು, ನನ್ನ ತಮ್ಮ, ಮಾವನ ಮಕ್ಕಳು ಎಲ್ಲರೂ ತುರ್ತಿನಿಂದ ತಯಾರಾಗುತ್ತಿದ್ದ ಗದ್ದಲ ಇಡೀ ಬೀದಿಗೇ ಕೇಳಿಸುವಂತಿತ್ತು!

ಕೊನೆಗೂ ಅಜ್ಜಿಯ ಸೂಕ್ಷ್ಮವಾದ ನಿರ್ವಹಣೆಯಲ್ಲಿ ಎಲ್ಲ ತಯಾರಿಗಳೂ ಸಿದ್ಧವಾದವು.

ತಿಂಡಿ, ಕಾಫಿ ಮತ್ತು ಹಣ್ಣುಗಳು ಎಲ್ಲವನ್ನೂ ತುಂಬಿಕೊಂಡಿದ್ದ ಒಂದು ದೊಡ್ಡ ಬುಟ್ಟಿ! ಚಾಪೆ, ಹಳೆ ಸೀರೆ, ಟವಲುಗಳ ದೊಡ್ಡ ಗಂಟು ಒಂದು! ನೀರು ತುಂಬಿದ ಕೊಡ ಎಂದೇ ಹೇಳ ಬಹುದಾದಷ್ಟು ಒಂದು ದೊಡ್ಡ ರೈಲ್ ಚೊಂಬು! ಮತ್ತು ನಾವುಗಳು!

ಈ ಎಲ್ಲವನ್ನೂ ಮತ್ತು ಎಲ್ಲರನ್ನೂ ಹೊತ್ತ ಎರಡು ಎತ್ತಿನ ಗಾಡಿಗಳು ಕೊನೆಗೂ 'ಜೈ' ಎಂದು ಹೊರಟೇ ಬಿಟ್ಟವು!

''ಅಜ್ಜಿ! ಟಾಟಾ!''

''ಬರೋವಾಗ ಊಟ ತಿಂಡಿ ಎಲ್ಲ ಕಾಲಿ ಆಗಿರ್ಬೇಕು! ಫ್ಲಾಸ್ಕಲ್ಲಿ ಕಾಫಿ ಇದೆ! ಮರೀಬೇಡಿ!'' ಅಜ್ಜಿಗೆ ನಾವು ಎಲ್ಲಿಗೆ ಹೋದರು ಏನು ಮಾಡುತ್ತಿದ್ದರೂ ನಮ್ಮ ಊಟ ತಿಂಡಿಗಳದ್ದೇ ಯೋಚನೆ!

ಎತ್ತುಗಳ ಕುತ್ತಿಗೆಗೆ ಕಟ್ಟಿದ್ದ ಗೆಜ್ಜೆಗಳ 'ಝುಲ್ ಝುಲ್' ಶಬ್ದದೊಂದಿಗೆ ನಮ್ಮ ಉತ್ಸಾಹದ ಕೂಗಾಟವೂ ಸೇರಿಕೊಂಡಿತು. ಗದ್ದೆಗಳನ್ನೂ, ತೋಟಗಳನ್ನೂ, ಹೊಳೆಯನ್ನೂ

ಹಾದು ಎಂಟು ಮೈಲಿಗಳ ಪಯಣದ ನಂತರ ಪಕ್ಕದ ಹಳ್ಳಿಯ ಟೆಂಟ್ ಸಿನಿಮಾ ಬಿಡಾರವನ್ನು ಸೇರಿದಾಗ ಎಲ್ಲರ ಹೃದಯಗಳಲ್ಲೂ ಅದೆಷ್ಟು ಉತ್ಸಾಹ!

ಆಗಲೇ ಜನರ ಮಿಲಿ ಮಿಲಿ ಶುರುವಾಗಿತ್ತು. ಸಿನಿಮಾ ಹಾಡುಗಳನ್ನ ಅಪಸ್ವರದಲ್ಲಿ ಉಗುಳುತ್ತಿದ್ದ ಲೌಡ್ ಸ್ಪೀಕರ್! ಬಿಡಾರದ ಸುತ್ತಲೂ ಆ ಮಧ್ಯಾನ್ನದ ಹೊತ್ತಿನಲ್ಲೂ ಬಣ್ಣದ ಬೆಳಕುಗಳ ತೋರಣಗಳು! ಒಂದೆಡೆ ಸಿನಿಮಾ ನಾಯಕನ ವರ್ಣ ಚಿತ್ರ ಹೊತ್ತ ದೊಡ್ಡ ಪೋಸ್ಟರ್! ಅದನ್ನು ಅಲಂಕರಿಸಿದ್ದ ದಪ್ಪ ದಪ್ಪ ಹೂಮಾಲೆಗಳು! ಬಿದಿರು ಬೇಲಿಯೊಳಗೆ ಟಿಕ್ಕೆಟ್ಟಿಗಾಗಿ ಕಾದು ನಿಂತ ಜನರ ನೂಕು ನುಗ್ಗಲು! ಪರದಾಡುತ್ತ ಅವರುಗಳಿಗೆ ಟಿಕ್ಕೆಟ್ಟುಗಳನ್ನು ಕೊಡುತ್ತಿದ್ದ ಒಣಕಲು ವ್ಯಕ್ತಿ!

ನಮಗಾಗಿ ಮಾವ ಮುಂಚಿತವಾಗಿಯೇ ನೆಲ, ಬೆಂಚು ಮತ್ತು ಕುರ್ಚಿಗಳ ಟಿಕ್ಕೆಟ್ಟುಗಳನ್ನು ಖರೀದಿಸಿ ರಂಗನ ಕೈಗೆ ಕೊಟ್ಟಿದ್ದರು. ಹಾಗಾಗಿ ನಾವು ಆ ನೂಕು ನುಗ್ಗಾಟಕ್ಕೆ ಸಿಕ್ಕಿಕೊಳ್ಳದೆ ಪ್ರತ್ಯೇಕವಾದ ಗೇಟ್ ಮೂಲಕ ಒಳಕ್ಕೆ ಹೋದೆವು.

ಜನರ ಗಜಿಬಿಜಿ! ಮಕ್ಕಳ ರೋದನೆ! ಹುಡುಗರ ಸಿಳ್ಳೆಗಳು! ಟೆಂಟ್ ತುಂಬಿ ಹೋಯಿತು! ಹೊರಗೆ ಯಾರೋ ಪಟಾಕಿ ಹೊಡೆದ ಶಬ್ದ! ಮಕ್ಕಳಾದ ನಾವೆಲ್ಲಾ ದಿಗ್ಭ್ರಾಂತರಾಗಿ ಕಣ್ಣಗಲಿಸಿ ಆ ವೈಭವವನ್ನೆಲ್ಲ ನೋಡುತ್ತ ಕುಳಿತೆವು! ಕಡೆಗೊಮ್ಮೆ ಟೆಂಟಿನ ಪರದೆಗಳನ್ನು ಇಳಿಬಿಡಲಾಯಿತು. ಕತ್ತಲಾವರಿಸಿದಾಗ ಎಲ್ಲರೂ ಗಪ್ಚಿಪ್ ಆದರು! ಇಗೋ! ನಾಯಕನ ಎಂಟ್ರಿ ಆದಾಗ ಮತ್ತೆ ಸಿಳ್ಳೆಗಳು! ತೆರೆಯ ಮುಂದೆ ಕುಣಿದಾಟ ಎಲ್ಲ ಶುರುವಾಯಿತು! ಸ್ವಲ್ಪ ಹೊತ್ತಿನಲ್ಲೇ ಚಲಿಸುತ್ತಿದ್ದ ಚಿತ್ರದಲ್ಲಿ ಎಲ್ಲರೂ ಮಗ್ನರಾದರು!

ಬೆಂಚಿನ ಮೇಲೆ ಕೂತು. ಮಿಠಾಯಿಯನ್ನು ಚೀಪುತ್ತ ಆ ಕಪ್ಪು ಬಿಳುಪಿನ ಚಲನ ಚಿತ್ರವನ್ನು ನಾವೆಲ್ಲಾ ಬಾಯಿ ಬಿಟ್ಟುಕೊಂಡು ವೀಕ್ಷಿಸಿದೆವು. ಅಮ್ಮ, ಮಾಮಿ, ಅತ್ತೆ ಅವರೆಲ್ಲ ಕುರ್ಚಿಯಲ್ಲಿ ಅಲುಗಾಡದೆ ಕುಳಿತು ಚಿತ್ರದಲ್ಲಿ ಮುಳುಗಿ ತಲ್ಲೀನರಾದರು. ಕೈ ಕೂಸುಗಳು ಅತ್ತಾಗ ಹಾಲಿನ ಸೀಸೆಗಳನ್ನು ತೆಗೆದು ಅವುಗಳ ಬಾಯಿಗೆ ತುರುಕಲಾಯಿತು! ಅವು ಹಾಲು ಕುಡಿದ ಮಂಪರಿನಲ್ಲಿ ನಿದ್ರಿಸಿದ ಮೇಲೆ ಹಳೆ ಸೀರೆಯ ಸುರುಳಿಯಲ್ಲಿ ಸುತ್ತಿ ರಂಗ ನೆಲದ ಮೇಲೆ ಹಾಸಿಕೊಟ್ಟ ಚಾಪೆಯ ಮೇಲೆ ಉರುಳಿಸಿದರು ತಾಯಂದಿರು! ನಂತರ ಯಾವ ಆತಂಕವೋ ಅಡಚಣೆಯೋ ಇಲ್ಲದೆ ನಿರಾಳವಾಗಿ ಚಿತ್ರವನ್ನು ವೀಕ್ಷಿಸಿದರು. ಹಸಿವಿನಿಂದ ನಾವು ರಾಗವೆಳೆದಾಗ ಸ್ಟೀಲ್ ಡಬ್ಬಿಗಳಲ್ಲಿ ತುಂಬಿಕೊಂಡು ಬಂದಿದ್ದ ತಿಂಡಿಗಳನ್ನು ತೆಗೆದು ನಮಗೆಲ್ಲ ವಿತರಣೆ ಮಾಡುತ್ತಿದ್ದರೂ ಅತ್ತೆಯವರ ಒಂದು ಕಣ್ಣು ಮಾತ್ರ ಪರದೆಯ ಮೇಲೆಯೇ ಕೇಂದ್ರಿಕೃತವಾಗಿದ್ದಿತು!

ಸಹಪಾಟಿಯರೊಂದಿಗೆ ಆಟವಾಡುತ್ತ, ಊಟ ಮಾಡುತ್ತಾ ನೆಲದ ಮೇಲೆ ಹೊರಳಾಡುತ್ತ ಬಾಲ್ಯದಲ್ಲಿ ನಾನು ನೋಡಿದ ಮೊದಲನೇ ಸಿನಿಮಾ ಟೆಂಟ್‌ಸಿನಿಮಾ ಅನುಭವ ಎಂದಿಗೂ ಮರೆಯುವಂತದ್ದಲ್ಲ! ಬಿಡಿಸಿಕೊಳ್ಳಲಾರದ ಸಿನಿಮಾ ಮೋಹವೆಂಬ ಬಲೆಯಲ್ಲಿ ನಾನು ಸಂಪೂರ್ಣವಾಗಿ ಸಿಲುಕಿಕೊಂಡು ಬಿಟ್ಟ ಅನುಭವವಲ್ಲವೇ ಅದು!

ದಿನ ಕಳೆದಂತೆ ನನ್ನ ಸಿನಿಮಾ ಮೋಹವೂ ನನ್ನೊಡನೆ ಬೆಳೆಯಿತು. ಮನೆಯವರೆಲ್ಲರೊಡನೆ ತಮಿಳು. ಕನ್ನಡ ಮತ್ತು ಅಪರೂಪಕ್ಕೊಂದು ಇಂಗ್ಲಿಷ್ ಸಿನಿಮಾ ನೋಡುವುದು ತಪ್ಪುತ್ತಿರಲಿಲ್ಲ! ತನ್ನ ವೃತ್ತಿಯ ಸಲುವಾಗಿ ಮುಂಬೈನಲ್ಲಿ ಕೆಲಕಾಲ ಉಳಿದುಕೊಂಡಿದ್ದು ನಿವೃತ್ತಿ ಹೊಂದಿದ್ದ ನನ್ನ ತಾತ ಅವರಿಗೆ ಹಿಂದಿ ಸಿನಿಮಾದಲ್ಲಿ ಬಹಳ ಆಸಕ್ತಿ. ಅದು ನನಗೆ ಬಹಳ ಅನುಕೂಲವಾಗಿದ್ದಿತು. ಅವರನ್ನು ಜೊತೆ ಮಾಡಿಕೊಂಡು ನನ್ನ ಆಪ್ತ ಸ್ನೇಹಿತೆಯನ್ನೂ ಕರೆದುಕೊಂಡು, ಟಾಂಗಾ ಸವಾರಿಯಲ್ಲಿ ಚಿತ್ರ ಮಂದಿರಕ್ಕೆ ಹೋಗಿ ನಾನು ನೋಡಿದ ಹಿಂದಿ ಸಿನಿಮಾಗಳು ಅನೇಕ! ಹಳ್ಳಿಯಲ್ಲಿ ಟೆಂಟ್ ಸಿನಿಮಾ ನೋಡಲು ಬಯಸದ ಅಜ್ಜಿಯನ್ನು ಅವರು ಮೈಸೂರಿಗೆ ಆಗಮಿಸಿದಾಗಲೆಲ್ಲ ಪೀಡಿಸಿ ಕಾಡಿಸಿ ಅವರೊಂದಿಗೆ ತೆಲುಗು ಮತ್ತು ಕನ್ನಡ ಪೌರಾಣಿಕ ಸಿನಿಮಾಗಳನ್ನು ನೋಡುವುದನ್ನು ರೂಢಿಸಿಕೊಂಡಿದ್ದೆ! ಹೀಗಾಗಿ ಎಲ್ಲ ಭಾಷೆಯ ಎಲ್ಲ ವಿಧವಾದ ಸಿನಿಮಾಗಳಲ್ಲೂ ನನಗೆ ಆಸಕ್ತಿಯೋ ಆಸಕ್ತಿ!

ಒಮ್ಮೆ ರಾಜ್ ಕಮಲ್ ಟಾಕೀಸಿನಲ್ಲಿ ಜನಪ್ರಿಯ ನಾಯಕನ ಕಲರ್ ಸಿನಿಮಾ ಬಿಡುಗಡೆಯಾಗಿತ್ತು. ಅಂದು ಕುಟುಂಬ ಸಮೇತವಾಗಿ ಆ ಸಿನಿಮಾ ನೋಡಲು ಬಲು ಉತ್ಸಾಹಗೊಂಡು ಎಲ್ಲರೂ ಹೊರಟು ನಿಂತೆವು. ಅದೇ ಸಮಯದಲ್ಲೇ ನಮ್ಮ ದೂರದ ಸಂಬಂಧಿಕರು ಬಂದಿಳಿಯ ಬೇಕೇ? ನನ್ನ ತಂದೆ ಮತ್ತು ತಾಯಿಯವರು ನಗುಮುಖದೊಂದಿಗೆ ಅವರುಗಳನ್ನು ಸ್ವಾಗತಿಸಿ ಉಪಚರಿಸಿದರು. ತಿಂಡಿ ಕಾಫಿ ಆದನಂತರವೂ ಅವರುಗಳು ಹೊರಡುವ ಸೂಚನೆಯೇ ಕಂಡು ಬರಲಿಲ್ಲ! ನಾನು ಗಡಿಯಾರವನ್ನೇ ನೋಡುತ್ತ ಕುಳಿತೆ. 'ಇನ್ನೂ ಹದಿನೈದು ನಿಮಿಷಗಳಲ್ಲಿ ಇವರುಗಳು ಹೊರಟರೂ ಪರವಾಗಿಲ್ಲ! ಸರಿಯಾದ ಸಮಯಕ್ಕೆ ನಾವು ಚಿತ್ರ ಮಂದಿರಕ್ಕೆ ಹೋಗಿ ಸೇರಬಹುದು!'

'ಇನ್ನೂ ಐಯ್ದು ನಿಮಿಷಗಳಾದರೂ ಚಿಂತೆ ಇಲ್ಲ! ಇಂಡಿಯನ್ ನ್ಯೂಸ್ ರಿವ್ಯೂ ನೋಡದಿದ್ದರೆ ಏನಾಯಿತು ಈಗ!'

'ಈಗಲೇ ಹೊರಟರೂ ಟೈಟಲ್ಸ್ ಮಿಸ್ ಆಗತ್ತೆ ಅಷ್ಟೇ!'

ನನ್ನನ್ನು ನಾನೇ ಸಮಾಧಾನ ಮಾಡಿಕೊಂಡು ಒಂದೊಂದು ನಿಮಿಷವನ್ನೂ ಕಷ್ಟ ಪಟ್ಟು ಮುಂದೂಡುತ್ತಾ ನೆಂಟರು ಹೊರಡುವ ಸಮಯವನ್ನೇ ಎದುರುನೋಡುತ್ತಿದ್ದೆ. ಆದರವರೋ ಸಿನಿಮಾದಲ್ಲಿ ಮಧ್ಯಾಂತರ ಬಿಡುವ ವೇಳೆಗಷ್ಟೇ ಎದ್ದು ಬೀಳ್ಕೊಂಡರು!

ಅವರುಗಳು ಅತ್ತ ಹೋಗಿದ್ದೇ ತಡ! ಇತ್ತ ಕನ್ನಂಬಾಡಿ ಕಟ್ಟೆ ಒಡೆದಂತೆ ನನ್ನ ದುಃಖದ ಕಟ್ಟೆ ಒಡೆಯಿತು! ಕಣ್ಣುಗಳಲ್ಲಿ ಜಲಪ್ರವಾಹ ನುಗ್ಗಿ ಹರಿಯಿತು! ಇನ್ನೂ ಹತ್ತು ದಿವಸಗಳಲ್ಲಿ ಪರೀಕ್ಷೆ ಶುರುವಾಗಲಿದೆ! ಅದು ಮುಗಿಯುವುದರಲ್ಲಿ ಆ ಸಿನಿಮಾ ಹೊರಟೇ ಹೋಗುತ್ತದೋ ಏನೋ!

ನಿರಾಶೆಯ ಭಾರವನ್ನು ಹೊತ್ತುಕೊಂಡು ಮರುದಿನ ಶಾಲೆಯಲ್ಲಿ ಅನ್ಯಮನಸ್ಕಳಾಗಿ ಪಾಠ ಕೇಳುತ್ತ ಕುಳಿತಿದ್ದೆ. ಇದಕ್ಕಿದ್ದ ಹಾಗೆ ತಾತ ಬಂದು ಪಾಠ ಮಾಡುತ್ತಿದ್ದ ವತ್ಸಲಾ ಟೀಚರ

ಅನುಮತಿಯೊಂದಿಗೆ ನನ್ನನ್ನು ಹೆಡ್ ಮಿಸ್ಟ್ರೆಸ್ ಬಳಿ ಕರೆದೊಯ್ದಳು. ಅಲ್ಲಿ ಸಿಸ್ಟರ್ ಅವರ ಎದುರಿಗೆ ಕುರ್ಚಿಯಲ್ಲಿ ಆಸೀನರಾಗಿದ್ದವರು ನನ್ನ ತಂದೆಯವರು! ನನ್ನನ್ನು ಕಂಡೊಡನೆ 'ಥ್ಯಾಂಕ್ ಯೂ ಸಿಸ್ಟರ್!' ಎಂದು ಹೆಡ್ ಮಿಸ್ಟ್ರೆಸ್ ಅವರಿಗೆ ಧನ್ಯವಾದ ಹೇಳಿ ನನ್ನನ್ನು ಕರೆದುಕೊಂಡು ಹೊರಟರು ಅಪ್ಪ. ಮನೆಯಲ್ಲಿ ಮುಖ್ಯವಾದ ನೆಂಟರು ಬಂದಿದ್ದರಂತೆ! ಅದಕ್ಕೆ ನನ್ನನ್ನು ಸ್ಕೂಲಿನಿಂದ ಬೇಗ ಕರೆದೊಯ್ಯಲು ಬಂದರಂತೆ!

ತುರ್ತಿನಿಂದ ಮನೆ ತಲುಪಿದಾಗ ಯಾವ ನೆಂಟರನ್ನೂ ಕಾಣಲಿಲ್ಲ!

''ಬೇಗನೆ ರೆಡಿ ಆಗು! ಮ್ಯಾಟಿನೀ ಷೋಗೆ ಬುಕ್ ಮಾಡಿದ್ದೀನಿ!'' ಎಂದಷ್ಟೇ ಅಪ್ಪ ಹೇಳಿದರು!

ನನ್ನಲ್ಲಿ ಆಕಾಶಕ್ಕೆ ಹಾರಿಬಿಡುವಷ್ಟು ಉತ್ಸಾಹ ಉಕ್ಕಿತು! ಸ್ಕೂಲಿಗೆ ಚಕ್ಕರ್ ಹೊಡೆಸಿ ಸಿನಿಮಾ ನೋಡಲು ಕರೆದುಕೊಂಡು ಹೋಗುವ ತಂದೆಯರನ್ನು ಯಾರು ತಾನೇ ನೋಡಿರುವರು?!

ಒಮ್ಮೆ ತಂದೆಯವರ ಆಪ್ತ ಮಿತ್ರರಾಗಿದ್ದ ಪೋಷಕ ನಟರಾದ ಸಂಪತ್ ಅವರು ನಮಗೆಲ್ಲ ಸಿನಿಮಾ ಚಿತ್ರೀಕರಣವನ್ನು ಕಾಣುವ ಅವಕಾಶವನ್ನು ಒದಗಿಸಿ ಕೊಟ್ಟರು. ಚಿತ್ರೀಕರಣಕ್ಕಿಂತ ನನಗೆ ಸಿನಿಮಾ ತಾರೆಯರನ್ನು ನೋಡುವ ಹುಮ್ಮಸ್ಸು!

ಪ್ರೀಮಿಯರ್ ಸ್ಟುಡಿಯೋದಲ್ಲಿನ ಒಂದು ಬೃಹದಾಕಾರದ ಕೊಠಡಿ! ಅದರಲ್ಲಿ ತೆಳುವಾದ ಹಲಗೆಗಳಿಂದ ನಿರ್ಮಿಸಲ್ಪಟ್ಟಿದ್ದ ಮನೆಯಂಗಳದ ಜೋಡನೆ! ಎಲ್ಲೆಲ್ಲೂ ಕಣ್ಣು ಕುಕ್ಕುವ ಬೆಳಕು! ಸುತ್ತ ಮುತ್ತ ಅನೇಕ ತಂತ್ರಜ್ಞರು ಮತ್ತು ಕಾರ್ಮಿಕರು! ಕ್ಯಾಮೆರಾ ಓಡ ತೊಡಗಿತು. ಅಂಗಳದ ಕಂಭ ಹಿಡಿದು ನಿಂತಿರುವಳು ನಾಯಕಿ. ಮೆಟ್ಟಲ ಮೇಲೆ ಓರ್ವ ಸಹ ನಟ!

ನಟಿ : ರಾಮೂ! ಎಜಮಾನ್ರು ಏನ್ ಮಾಡ್ತಿದ್ದಾರೆ?

ನಟ : ಒಳಗೆ ದೊಡ್ ಪುಸ್ತ್ಕ ಓದ್ತಿದ್ದಾರೆ ಅಮ್ಮ!

ಈ ಸಾಲುಗಳನ್ನೇ ಅದೆಷ್ಟು ಬಾರಿ ಹೇಳುತ್ತಿದ್ದರೋ? ಯಾರೋ 'ಕಟ್' ಅಂದರು! ನಾಯಕಿ ಹುಡುಗ ತಂದು ಕೊಟ್ಟ ಕನ್ನಡಿ ನೋಡಿಕೊಂಡು ಸರಿಯಾಗಿಯೇ ಕಂಡ ಕೂದಲನ್ನು ಮತ್ತೆ ಸರಿ ಮಾಡಿಕೊಂಡಳು! ಯಾರೋ 'ಲೈಟ್ಸ್' ಅಂದರು! ಇನ್ನೊಬ್ಬರು 'ಟೇಕ್' ಅಂದರು! ಮತ್ತೆ ಅದೇ ಡೈಲಾಗ್ ಶುರುವಾಯಿತು! ನನಗಂತೂ ಆಕಳಿಕೆ ಬಂದಿತು.

ಸುಳ್ಳು ಬಂಗಲೆಯಲ್ಲಿ ನಿಂತು ಅಲ್ಲಿ ಇಲ್ಲದ ಎಜಮಾನರ ಬಗ್ಗೆ ವಿಚಾರಣೆ! 'ಒಳಗೆ' ಎಂಬುದೇ ಇಲ್ಲದ ಒಳಗೆ. ಇಲ್ಲದ ಎಜಮಾನರು ಪುಸ್ತಕ ಓದುತ್ತಿರುವುದಾಗಿ ಹೇಳಲ್ಪಟ್ಟ ಉತ್ತರ!

''ಯಾಕಮ್ಮ? ಬೇಜಾರಾಯಿತೆ? ಸಿನಿಮಾ ಅಂದರೆ ಹಾಗೆ! ನೀನು ಚಿತ್ರಗಳಲ್ಲಿ ನೋಡುವ ಅದ್ದೂರಿಯ ಭವ್ಯ ಬಂಗಲಿಗಳು ಇಂತಹ ತೆಳುವಾದ ಪ್ಲೈವುಡ್

ಹಲಗೆಗಳಿಂದ ನಿರ್ಮಿತವಾದ 'ಸೆಟ್'ಗಳೇ! ಈ ದೃಶ್ಯ ಸಿನಿಮಾದಲ್ಲಿ ಒಂದು ನಿಮಿಷ ಬರತ್ತೋ. ಅದೂ ಇಲ್ಲವೋ ಕಾಣೆ! ಅದಕ್ಕೆ ಎಷ್ಟೊಂದು ಜನ ಕೆಲಸ ಮಾಡುತ್ತಿದ್ದಾರೆ ನೋಡು! ನಾಳೆ ಇನ್ನೊಂದು ಶೂಟಿಂಗ್ ಇದೆ! ನೋಡುತ್ತಿಯೇನು।'' ಸಂಪತ್ ಅವರು ಚಿತ್ರೀಕರಣದ ಬಗ್ಗೆ ಉತ್ಸಾಹದಿಂದ ವಿವರಿಸಿದ್ದು ಕೇಳಿ ನನಗೆ 'ಸಾಕಪ್ಪಾ ಈ ಕಷ್ಟ!' ಅನ್ನಿಸಿತು. ಸುಳ್ಳಿನ ವೈಭವೀಕರಣವಾಗಿದ್ದರೂ ಒಂದು ಸಿನಿಮಾ ಮಾಡುವುದು ಎಷ್ಟು ಕಷ್ಟ ಅನ್ನಿಸಿತು. ಇಷ್ಟು ಕಷ್ಟ ಪಟ್ಟು ಮಾಡುವ ಸಿನಿಮಾವನ್ನು 'ಛೇ! ಡಬ್ಬ!' ಎಂದು ಒಂದೇ ಕ್ಷಣದಲ್ಲಿ ತೆಗೆದುಹಾಕುವುದು ಸರಿ ಇಲ್ಲ ಅನ್ನಿಸಿತು. ಹಾಗಾಗಿ ಎಂತಹ ಸಿನಿಮಾವನ್ನೂ ಸಂತೋಷದಿಂದ ನೋಡುವ ರಸಿಕತನ ನನ್ನಲ್ಲಿ ಬೆಳೆಯಿತು!

ಮೈಸೂರಿನಲ್ಲಿ ಹೇರಳವಾದ ಸಿನಿಮಾ ಚಿತ್ರೀಕರಣಗಳು ನಡೆಯುತ್ತಿದ್ದ ಕಾರಣ ಸ್ಥಳೀಯರಿಗೂ ಒಮ್ಮೊಮ್ಮೆ ಸಣ್ಣ ಪುಟ್ಟ ಪಾತ್ರಗಳನ್ನು ಮಾಡುವ ಅವಕಾಶಗಳು ದೊರಕುತಿದ್ದವು. ನನ್ನ ತಂದೆಯವರಿಗೆ, ನಿರ್ಮಾಪಕರಾಗಿದ್ದ ಅವರ ಸ್ನೇಹಿತರ ಒಂದು ಚಿತ್ರದಲ್ಲಿ ಪೊಲೀಸ್ ಕಮಿಷನರ್ ಪಾತ್ರ ಮಾಡಿ ಒಂದೆರಡು ಸಾಲುಗಳನ್ನು ಮಾತನಾಡಲೂ ಅವಕಾಶ ಸಿಕ್ಕಿತು. ತಂದೆಯವರು ಸಿನಿಮಾದಲ್ಲಿ ಪಾರ್ಟ್ ಮಾಡುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿತ್ತು.

ಸಿನಿಮಾ ಬಿಡುಗಡೆಯಾದಾಗ ನಮ್ಮೆಲ್ಲರಿಗೂ ಹೇಳಲಾರದಷ್ಟು ಸಂತೋಷ ಸಂಭ್ರಮ! ಸ್ವಂತದಲ್ಲಿದ್ದ ಚಿತ್ರ ಮಂದಿರದಲ್ಲಿ ನಮ್ಮ ಮನೆಯವರಿಗೆಂದೇ ಪ್ರತ್ಯೇಕವಾಗಿ ಒಂದು ಷೋ ಏರ್ಪಡಿಸಲಾಗಿತ್ತು. ನಾವೆಲ್ಲರೂ ತಂದೆಯವರ ಹೆಸರಿನಲ್ಲಿ ಅಭಿಮಾನಿಗಳ ಸಂಘ ಎಂದು ಬ್ಯಾಡ್ಜ್‌ಗಳನ್ನು ತಯಾರಿಸಿ ಧರಿಸಿಕೊಂಡೆವು. ಇಡೀ ಚಿತ್ರ ಮಂದಿರವನ್ನು ನಾವೇ ಆಕ್ರಮಿಸಿಕೊಂಡಿದ್ದ ಕಾರಣ ನಮ್ಮ ಗಲಭೆಗೂ ಗಲಾಟೆಗೂ ಮಿತಿಯೇ ಇರಲಿಲ್ಲ.

ತಂದೆಯವರು ಕಮಿಷನರ್ ವೇಷದಲ್ಲಿ ಗಂಭೀರವಾಗಿ ಹಾಜರಾದಾಗ ನಾವೆಲ್ಲಾ ಚಪ್ಪಾಳೆ ತಟ್ಟಿ, ಕೊಂಡೊಯ್ದಿದ್ದ ಪ್ಲಾಸ್ಟಿಕ್ ವಿಸಿಲ್‌ಗಳನ್ನು ಊದಿ (ಬಾಯಲ್ಲಿ ಬೆರಳಿಟ್ಟು ಸಿಳ್ಳೆ ಹೊಡೆಯುವ ಕಲೆಯನ್ನು ಕಲಿತಿರದ ಕಾರಣ!) ಸಿಳ್ಳೆ ಎಬ್ಬಿಸಿದೆವು! ಚಿತ್ರ ಮಂದಿರದ ತುಂಬ ಕೊಲಾಹಲವೋ ಕೋಲಾಹಲ! ನಂತರ ಅವರು ತನ್ನ ಡೈಲಾಗ್ ಹೇಳಲು ಪ್ರಾರಂಭಿಸಿದರು! ನಾವೆಲ್ಲರೂ ಒಂದು ಕ್ಷಣ ದಂಗಾದೆವು! ಸಿಂಹ ಗರ್ಜನೆಯಂತಹ ಅವರ ಗಂಭೀರ ಧ್ವನಿ ಯಾಕೆ ಇಷ್ಟು ಪೀಚಾಗಿ ಕೇಳಿಸುತ್ತಿದೆ?! ಆ ಸಿನಿಮಾದ ಡಬ್ಬಿಂಗ್ ಬೇರೆ ಕಡೆ ಮಾಡಿಸಲಾಯಿತಂತೆ ಎರಡು ಸಾಲುಗಳನ್ನು ಹೇಳುವುದಕ್ಕಾಗಿ ತಂದೆಯವರನ್ನು ಅಲ್ಲಿಗೆ ಕರೆಸುವುದರ ಬದಲಾಗಿ, ಬೇರೆಯವರಿಂದ ಡಬ್ಬಿಂಗ್ ಮಾಡಿಸಿಕೊಂಡು ಬಿಟ್ಟರಂತೆ ನಿರ್ಮಾಪಕರು! ವಿಷಯ ಕೇಳಿ ಬಹಳ ಬೇಸರವಾಯಿತು. ಹಾಡುಗಳನ್ನು ಮಾತ್ರವಲ್ಲದೆ ಮಾತುಗಳನ್ನೂ ಸಹ ಬೇರೆಯವರ ಕೈಯಲ್ಲಿ ಡಬ್ಬಿಂಗ್ ಮಾಡಿಸಬೇಕೇ?

ತಂದೆಯವರ ಧ್ವನಿಯಲ್ಲಿ ಅವರದ್ದೇ ಆದ ಗಂಭೀರ ಮುದ್ರೆ ಇರುತ್ತಿತ್ತು! ಅದನ್ನು ಇಲ್ಲದಂತೆ ಮಾಡಿ, ಇಲ್ಲದ ಪೀಚಲು ಧ್ವನಿಯನ್ನು ಅವರಿಗಿರುವಂತೆ ತೋರಿದ ಸಿನಿಮಾ.

ಒಂದು ಪ್ರಭಾವಶಾಲಿ ಸುಳ್ಳು! ಮಿಥ್ಯೆ! ಮಾಯೆ!

ಇಷ್ಟೆಲ್ಲಾ ಅರಿತಿದ್ದರೂ ಈ ಸಿನೆಮಾ ಎಂಬ ಮೋಹ ಮಾಯೆಯಿಂದ ಬಿಡಿಸಿಕೊಳ್ಳುವುದು ನನಗೆ ಅಸಾಧ್ಯವೇ ಆಗಿದೆ.

ನನ್ನ ಮಕ್ಕಳು ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ಪ್ರತಿಶುಕ್ರವಾರವೂ ಬಿಡುಗಡೆಯಾಗುತ್ತಿದ್ದ ಹೊಸ ಸಿನಿಮಾ ನೋಡಲು ಡ್ರೈವ್ ಇನ್ ಥಿಯೇಟರ್ಗೆ ಹೋಗುವುದನ್ನು ಒಂದು ವ್ರತದಂತೆ ಆಚರಿಸುತ್ತಿದ್ದೆವು. ಕಾರಿನಲ್ಲೇ ಕೂತು ನೋಡುವುದಕ್ಕಿಂತ ಕೊಂಡೊಯ್ದಿದ್ದ ಕುರ್ಚಿಗಳನ್ನು ಕಾರಿನ ಪಕ್ಕದಲ್ಲೇ ಹಾಕಿಕೊಂಡು ಕೂತು, ಸಿನಿಮಾ ನೋಡುವುದನ್ನೇ ನಾವೆಲ್ಲ ಇಷ್ಟ ಪಟ್ಟೆವು. ಓಡೋಮಾಸ್ ಹಚ್ಚಿಕೊಂಡು ತಂಗಾಳಿಯನ್ನು ಅನುಭವಿಸುತ್ತ ಡ್ರೈವ್ ಇನ್ ಸ್ಪೆಷಲಾದ ಮಸಾಲೆ ದೋಸೆಯನ್ನೂ ಪಾವ್ ಭಾಜಿಯನ್ನೂ ಸವಿಯುತ್ತ ಬೃಹದಾಕಾರದ ಪರದೆಯ ಮೇಲೆ ಚಲಿಸಿದ ಹಿಂದಿ ಚಿತ್ರಗಳನ್ನು ನೋಡುವುದೇ ಒಂದು ಆನಂದ ದಾಯಕವಾದ ಅನುಭವವಾಗಿದ್ದಿತು.

ಇಷ್ಟೆಲ್ಲಾ ಹೇಳಿದ ಮೇಲೆ ನಾವು ವಿದೇಶದಲ್ಲಿ ಸಿನಿಮಾ ನೋಡಿದ ಅನುಭವವನ್ನು ಹೇಳಲೇ ಬೇಕು! ಚುಂಚನ ಕಟ್ಟೆ ಜಾತ್ರೆಗೆ ಹೋದಾಗ ಅಲ್ಲೂ ಬಿಡದೆ ಟೆಂಟ್ ಸಿನಿಮಾ ನೋಡಿದ ನಾನು ಪೋರ್ಟ್ಲ್ಯಾಂಡಿನಲ್ಲಿ ಸಿನಿಮಾ ನೋಡದೇ ಇರುತ್ತೇನೆಯೇ? ಆ ದಿನ ತಾನೇ ಬಿಡುಗಡೆಯಾಗಿದ್ದ ನಮ್ಮವರೇ ಆದ ಅತಿ ಮಹತ್ವದ ನಾಯಕರ ಒಂದು ಸಿನಿಮಾ ನೋಡಲು ನಾನು ನನ್ನ ಪತಿಯವರೊಂದಿಗೆ ಅತಿ ಸಂಭ್ರಮದಿಂದ ಹೊರಟ್ಟಿದ್ದೆ. ತುಂಬಿದ್ದ ಚಿತ್ರ ಮಂದಿರದಲ್ಲಿ ದೇಸೀ ಅಭಿಮಾನಿಗಳ ಅಭಿಮಾನ ಕಂಡು ನನಗೆ ಅತಿ ವಿಸ್ಮಯವೇ ಆಯಿತು. ನಾಯಕನ ಎಂಟ್ರಿ ಆದ ಕೂಡಲೇ ಉಚ್ಚ ಸ್ಥಾಯಿಯಲ್ಲಿ ಮೊಳಗಿದ ಸಿಳ್ಳೆ ಮತ್ತು ಚಪ್ಪಾಳೆ ಅಭಿಮಾನಿಗಳು ಕೈತುಂಬಾ ತೆಗೆದು ತೆರೆಯನ್ನು ಕುರಿತು ಎರಚಿದ ನಾಣ್ಯಗಳ 'ಝಣ ಝಣ'! ಇವೆಲ್ಲ ನನಗೆ ನನ್ನ ಬಾಲ್ಯದ ಟೆಂಟ್ ಸಿನಿಮಾದ ಅನುಭವವನ್ನು ನೆನಪಿಸುವಂತಿತ್ತು! ನಮ್ಮವರು ಎಲ್ಲಿದ್ದರೂ ನಮ್ಮವರೇ ಎಂದೂ ಅನ್ನಿಸಿತು!

ಹೀಗೆ ಎಲ್ಲ ವಿಧವಾದ ಸಿನಿಮಾಗಳನ್ನೂ ನೋಡ ನೋಡುತ್ತ ವಯಸ್ಸೂ ಆಗುತ್ತಲೇ ಬಂದಿದೆ. ಆದರೇನಂತೆ? ಇಂದಿನ ತ್ರೀ ಡಿ ಸಿನಿಮಾಗಳ ಮತ್ತು ಅನಿಮೇಷನ್ ಸಿನಿಮಾಗಳ ಮೋಹಕ ಆಕರ್ಷಣೆಯಿಂದ ಯಾರು ತಾನೇ ತಪ್ಪಿಸಿಕೊಳ್ಳಲು ಸಾಧ್ಯ? ಮಲಗಿಕೊಂಡೆ ನೋಡಬಹುದಾದಂತಹ ಆಸನದ ವ್ಯವಸ್ಥೆ ಹೊಂದಿರುವ ಸಿಡ್ನಿಯ ಒಂದು ಮಲ್ಟಿಪ್ಲೆಕ್ಸ್ ಚಿತ್ರಮಂದಿರದಲ್ಲಿ ಕೂತು (ಮಲಗಿ) ಆಧುನಿಕ ತಂತ್ರಜ್ಞಾನವನ್ನು ಬಳಸಿ ಚಿತ್ರೀಕರಣ ಮಾಡಿರುವ 'ಜುರಾಸಿಕ್ ವರ್ಲ್ಡ್' ಸಿನಿಮಾ ನೋಡಿದ ಸಮಯ, ಬಾಲ್ಯದಲ್ಲಿ ನೆಲದ ಮೇಲೆ ಹೊರಳಾಡುತ್ತಾ ಟೆಂಟಲ್ಲಿ ಸಿನಿಮಾ ನೋಡಿದ ನೆನಪು ಮರುಕಳಿಸಿತು!

ಪ್ರಪಂಚದಲ್ಲಿ ಸಿನಿಮಾ ಮೋಹದಲ್ಲಿ ಸಿಕ್ಕಿಕೊಂಡಿರುವ ಅಭಿಮಾನಿಗಳ ಸಂಖ್ಯೆ ಅಪಾರವೇ ಇರಬೇಕು! ಎಷ್ಟೋ ತಾಂತ್ರಿಕ ಉಪಕರಣಗಳಿಗೆ ವಿದಾಯ ಹೇಳುತ್ತಿರುವ ಈ ನವ ಯುಗದಲ್ಲಿ ಸಿನಿಮಾ ಎಂಬ ತಾಂತ್ರಿಕ ಮಾಧ್ಯಮ ಮಾತ್ರ ದಿನೇ ದಿನೇ ಹೊಸ ಹೊಸ

ರೂಪ ತಾಳಿ ಬೆಳವಣಿಗೆ ಹೊಂದುತ್ತಿರುವುದು ಜನ ಮನಗಳನ್ನ ಸೂರೆಗೊಂಡಿರುವ ಆ ನಮ್ಮ ಸಿನೆಮಾ ಎಂಬ ಮೋಹ ಮಾಯೆಯಿಂದಲೇ ಅಲ್ಲವೇ?

ಸಿನಿಮಾ ತಾರೆಯರನ್ನು ಮಂತ್ರಿಪದವಿಗೇರಿಸುವುದು.

ಸಿನಮಾ ಶೈಲಿಯಲ್ಲಿ ಬ್ಯಾಂಕ್ ದರೋಡೆ ಮಾಡುವುದು.

ತೊಟ್ಟ ಕೆಂಪು ಅಂಗಿ ಬಿಚ್ಚಿ ಬೀಸಿ ಹಳಿ ತಪ್ಪಲಿರುವ ರೈಲ್ ಗಾಡಿಯನ್ನು ನಿಲ್ಲಿಸುವುದು.

ಇವೆಲ್ಲ ಸಿನಿಮಾ ಎಂಬ ಮೋಹ ಮಾಯೆಯ ಪ್ರಭಾವದಿಂದಲೇ ಅಲ್ಲವೇ?

ಕತ್ತಲಲ್ಲಿ ಕುಳಿತು ನಾವು ಸಿನಿಮಾ ನೋಡುತ್ತೇವೆ. ಪರದೆಯ ಮೇಲೆ ಚಲಿಸುವ ಪಾತ್ರಗಳೊಂದಿಗೆ ಲಯವಾಗುತ್ತೇವೆ. ಅವರೊಂದಿಗೆ ಅಳುತ್ತೇವೆ. ನಗುತ್ತೇವೆ! ಆವೇಶಗೊಳ್ಳುತ್ತೇವೆ! ಸಿನಿಮಾ ಮುಗಿದು ಬೆಳಕು ಹಚ್ಚಿದಾಗ ನಾವು ಆವರೆಗೆ ಕಂಡ ಚಿತ್ರಗಳೆಲ್ಲ ಕಣ್ಮರೆಯಾಗಿ ಬರಿ ಬಿಳಿಯ ತೆರೆಯನ್ನು ಮಾತ್ರ ನಾವು ಕಾಣುತ್ತೇವೆ!

ಅದೇ ರೀತಿ ಅಜ್ಞಾನವೆಂಬ ಇರುಳು ನಮ್ಮನ್ನು ಕವಿದಿರುವಾಗ ನಮ್ಮನ್ನು ಈ ಜಗತ್ತು, ನಾನು, ನೀನು. ಅವನು ಎಂಬ ಚಿತ್ರಗಳು ಆಕ್ರಮಿಸಿಕೊಂಡಿರುತ್ತವೆ. ಅಜ್ಞಾನ ನಶಿಸಿ ಜ್ಞಾನದ ಬೆಳಕು ಬೆಳಗಿದಾಗ ಮಾಯೆ ಕಳಚಿ ಬೀಳುತ್ತದೆ. ಆವರೆಗೂ ಕಾಣುತ್ತಿದ್ದ ಚಿತ್ರಗಳೆಲ್ಲ ಕಾಣೆಯಾಗಿ, ನಂತರ ನಮಗೆ ಕಾಣಿಸುವುದೆಲ್ಲ ಶುದ್ಧ ಚೈತನ್ಯವಾದ ನಾನು ಬ್ರಹ್ಮನ್ ಎಂಬ ಬೆಳ್ಳಿತೆರೆ ಮಾತ್ರ.

ಇದ್ದಕ್ಕಿದ್ದ ಹಾಗೆ ಸಿನಿಮಾದಿಂದ ಆತ್ಮ ವಿಚಾರವೇ ಎಂದು ಆಶ್ಚರ್ಯಗೊಳ್ಳಬೇಡಿ. ಮಹಿಮಾನ್ವಿತರಾದ ಮಹರ್ಷಿ ಓರ್ವರು ತಮ್ಮ ಆತ್ಮ ವಿಚಾರಣೆಯ ಬಗ್ಗೆಗಿನ ಬೋಧನೆಗೆ ಸಿನಿಮಾ ಎಂಬ ಸಾಧನವನ್ನೇ ಹೀಗೆ ದೃಷ್ಟಾಂತವಾಗಿ ತೆಗೆದುಕೊಂಡಿದ್ದಾರೆ.

ಕಡೆಗೂ ನಮ್ಮಂತಹ ಅಜ್ಞಾನಿಗಳಿಗೆ ಜ್ಞಾನದ ಅರಿವು ಮೂಡಿಸುವುದಕ್ಕೂ ಸಿನಿಮಾ ಎಂಬ ಸಾಧನವೇ ಸೂಕ್ತ ದೃಷ್ಟಾಂತ ಎಂದಾದ ಮೇಲೆ ಈ ಸಿನಿಮಾ ಎಂಬ ಮೋಹ ಮಾಯೆಯ ಪ್ರಭಾವಕ್ಕೆ ಏನೆಂದು ಹೇಳ ಬೇಕೋ ನಾನರಿಯೆ!



ಅಪರಂಜಿಗೆ ಹಾರ್ದಿಕ ಶುಭಾಶಯಗಳು

**ಡಾ. ಎಚ್.ಎಸ್. ಮುರಳಿ**

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093

# ಸಿನಿ ಹನಿ

– ಎಚ್. ಡುಂಡಿರಾಜ್

ಸಿನಿಮಾ ವಿಶೇಷ

## ಹಾವಳಿ

*ಹಿಂದಿ ಚಿತ್ರರಂಗದಲ್ಲಿ*
*ಖಾನರದ್ದೆ ಹಾವಳಿ*
*ಶಾರೂಖ್ ಖಾನ್*
*ಸಲ್ಮಾನ್ ಖಾನ್*
*ಆಮೀರ್ ಖಾನ್...*
*ಬಾಲಿವುಡ್ ಅಂದರೆ*
*ಖಾನಾವಳಿ!*

## ಸರೀನಾ?

*ಗಣೇಶೋತ್ಸವದ*
*ವಿಶೇಷ ಆಕರ್ಷಣೆ*
*ಹಿಂದಿ ನಟಿ ಕರೀನಾ*
*ಬ್ರಹ್ಮಚಾರಿಯ ಮುಂದೆ*
*ಹಿಂದಿ ತಾರೆ*
*ಡಾನ್ಸ್ ಮಾಡೋದು*
*ಸರೀನಾ?*

## ಇರಬಾರದು

*ಇರಬೇಕು ಸಿನಿಮಾದಲ್ಲಿ*
*ಹೊಡೆದಾಟ, ಹಾಡು, ನೃತ್ಯ*
*ಪೋಲಿ ಮಾತು, ಪ್ರಣಯ*
*ಹಾಸ್ಯವೂ ಅತ್ಯಗತ್ಯ*
*ನಾಯಕನ ಮುಖದಲ್ಲಿ ನಗೆ*
*ಖಳನಾಯಕನಿಗೆ ಹೊಟ್ಟೆ*
*ಇರಬಾರದ್ದು ಒಂದೆ*
*ನಾಯಕಿಯ ಮೈಮೇಲೆ ಬಟ್ಟೆ!*

## ಬತ್ತಲೆ

*ಪೂನಂ ಪಾಂಡೆ ಏನು ಮಹಾ?*
*ಬತ್ತಲಾಗುವುದು ಗೊತ್ತು*
*ನಮಗೂ ಸಹಾ*
*ಎನ್ನುತ್ತ ನಾಚಿಕೆ ಇಲ್ಲದೆ*
*ಎಲ್ಲರ ಎದುರಲ್ಲೆ*
*ಕಿತ್ತು ಬಿಸಾಕುತ್ತಿವೆ*
*ಚಳಿಗಾಲದಲ್ಲಿ ಮರಗಳು ಎಲೆ!*

## ಹೊಡೆಯುತ್ತಿದೆ

*ಚಿತ್ರ ಹಿಟ್ ಆದರೆ ಹಣ*
*ಕೊಳ್ಳೆ ಹೊಡೆಯುತ್ತಾರೆ*
*ತೋಪಾದರೆ ಮನೆಯಲ್ಲಿ*
*ಸೊಳ್ಳೆ ಹೊಡೆಯುತ್ತಾರೆ*

## ಉದ್ಗಾರ

*ಗಣೇಶೋತ್ಸವದಲ್ಲಿ*
*ಕರೀನಾಳ ಡಾನ್ಸ್ ನೋಡಿ*
*ಕರಿವದನನ ಉದ್ಗಾರ*
*ಕರೀನಾ ಕಪೂರ*
*ಆಹಾ! ಎಷ್ಟು ಸಪೂರ!*

## ಭೂಷಣ

*ನಾಯಕಿಯ ಗಲ್ಲಕ್ಕೆ*
*ಕಪ್ಪು ಮಚ್ಚೆ ಭೂಷಣ*
*ನಾಯಕನ ಕೈಗೆ*
*ಲಾಂಗು ಮಚ್ಚೇ ಭೂಷಣ!*

ಸಿನಿಮಾ ವಿಶೇಷ

**ಸ್ಟಾರ್ಟ್... ಆಕ್ಷನ್... ಕಟ್**

# ಎರಡೆರಡು ಚಂದ್ರನ ಕತೆ

**- ಎಂ.ಕೆ. ಭಾಸ್ಕರ ರಾವ್**

**ಸಿ**ನಿಮಾಕ್ಕಿರುವ ಅಯಸ್ಕಾಂತ ಶಕ್ತಿ ಇತರ ಕಲಾ ಮಾಧ್ಯಮಗಳಲ್ಲಿ ಇಲ್ಲ. ಇದು ಒಂದು ರೀತಿಯಲ್ಲಿ ಆಕರ್ಷಣೆಯ ಶೃಂಗ. ಇನ್ನೊಂದು ರೀತಿಯಲ್ಲಿ ದೀಪದತ್ತ ಹಾರುವ ಪತಂಗ. ಅಪಾಯ ಗಮನಿಸದೆ ಮುನ್ನುಗ್ಗುವ ಚಾಳಿಯನ್ನು ಉತ್ತೇಜಿಸುವ ಜಗತ್ತಿನ ಏಕಮೇವ ಕಲೆ ಎಂದರೆ ಸಿನಿಮಾ. ಜಗತ್ತಿನೆಲ್ಲೆಡೆ ಈ ಉದ್ಯಮದ ಹಾಡು ಪಾಡು ಒಂದೇ. ಹಾಲಿವುಡ್‌ನಂಥ ದೂರದಲ್ಲಿ ಘಟಿಸುವ ಅನಾಹುತ ನಮ್ಮ ನಜರಿಗೆ ಬರುವುದಿಲ್ಲ; ಬಂದರೂ ದೂರದ ಬೆಟ್ಟ ನುಣ್ಣಗೆ.

**ಸಿನಿಮಾ ಎನ್ನುವುದು ನಮ್ಮ ರಾಜಕಾರಣದಂತೆ ಅದಕ್ಕೆ ಯಾವುದೇ ಅರ್ಹತೆಯೂ ಬೇಕಾಗಿಲ್ಲ**

ಸಿನಿಮಾದಲ್ಲಿ ಮುಖ ತೋರಿಸಿದರೆ ಒಂದು ಸುಖ. ಇತರರ ಮುಖ ತೋರಿಸುವಂಥ ಸ್ಥಾನದಲ್ಲಿದ್ದರೆ ಅದು ಇನ್ನೊಂದು ಬಗೆಯ ಸುಖ. ಸಿನಿಮಾ ಎನ್ನುವುದು ನಮ್ಮ ರಾಜಕಾರಣದಂತೆ. ಅದಕ್ಕೆ ಯಾವುದೇ ಅರ್ಹತೆಯೂ ಬೇಕಾಗಿಲ್ಲ. ಹಣ ಚೆಲ್ಲಲು ಸಿದ್ಧರಿದ್ದೀರಾದರೆ ನಾಳೆಯೇ ನೀವು ನಿರ್ಮಾಪಕರಾಗಬಹುದು. ನಿಮ್ಮ ಮಗ ಅದರಲ್ಲಿ ಹೀರೋ ಆಗಬಹುದು. ಅಂಥ ಒಬ್ಬ ಕನ್ನಡ ನಿರ್ಮಾಪಕನ ಒಂದು ಮಗ್ಗುಲ ಕಥೆ ಇದು.

ಸುತ್ತಮುತ್ತಲ ಹಳ್ಳಿ ಹಳ್ಳಿಗಳಿಂದ ಬೆಳಗಿನ ಚುಮು ಚುಮು ಝಾವದಲ್ಲಿ ಬೆಂಗಳೂರಿನತ್ತ ಲಾರಿ ಲಾರಿ ಲೋಡು ತರಕಾರಿ ಬರುತ್ತದೆ ಎನ್ನುವುದು ನಮಗೆ ಗೊತ್ತು. ಅದನ್ನು ತರುವ ಬೆಳೆಗಾರರ ಮುಖವನ್ನು ನಾವ್ಯಾರೂ ಕಂಡಿಲ್ಲ. ನಮ್ಮ ಕಥಾನಾಯಕ ಮಾತ್ರ ಈ ಮಾತಿಗೆ ಅಪವಾದ. 40-50 ವರ್ಷ ಇರಬಹುದು. ಆ ದಿನಗಳಲ್ಲೇ ಈ ಮಹಾಶಯ ಲೋಡುಗಟ್ಟಲೆ ತರಕಾರಿಯನ್ನು ಅದು ಬೆಂಗಳೂರಿನ ಗಡಿಯೊಳಗೆ ಬರುವುದಕ್ಕೆ ಮೊದಲೇ ಖರೀದಿಸಿ ತನ್ನದೇ ದರದಲ್ಲಿ ವಿವಿಧ ಅಂಗಡಿಗಳಿಗೆ ಪೂರೈಸುವ ಉದ್ಯೋಗ ಆರಂಭಿಸಿದ.

ಕಾಯಕವೇ ಕೈಲಾಸ. ಆತ ನಂಬಿದ ಉದ್ಯೋಗ ಕೈಕೊಡಲಿಲ್ಲ. ಹನಿಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ಬಳ್ಳ. ಕೊಂಡ ದರಕ್ಕೂ ಮಾರುವ ಬೆಲೆಗೂ ಸತತ ಅಂತರ ಕಾಯ್ದುಕೊಂಡ. ಕ್ರಮೇಣ ಲಕ್ಷಾಧೀಶನಾದ, ಕೋಟ್ಯಧಿಪತಿಯೂ ಆದ. ಮನೆ ಮಹಲು ಬಂಗಲೆ ಫಾರ್ಮ್ ಹೌಸ್ ಇತ್ಯಾದಿ ವೈಭೋಗ. ಹೊಸ ಶ್ರೀಮಂತರಿಗೆ ಪುಕಟ್ ಸಲಹೆ ನೀಡುವವರಿಗೆ ಕೊರತೆ ಇರಲ್ಲ ಎನ್ನುತ್ತಾರೆ, ತಿಳಿದವರು. ಶ್ರೀಮಂತಪ್ಪನ ಸುತ್ತ ಸಲಹಾ ಮಂಡಲಿ ಸೇರಿತು. ಅವರೆಲ್ಲ ಸಜ್ಜನರೇ, ಯಾರೊಬ್ಬರೂ ಹಣ ಬೇಡಿ ಸಲಹೆ ಸೂಚನೆ

ಕೊಡಲಿಲ್ಲ. ಸಂಜೆಯಾಗುತ್ತಿದ್ದಂತೆ ಒಂದೆಡೆ ಕೂಡಲು, ಕುಡಿಯಲು ಎಡೆ ಮಾಡಿಕೊಟ್ಟರಷ್ಟೇ ಸಾಕಾಗಿತ್ತು. ಹಣದ ಅಮಲಿನಲ್ಲಿ ಓಲಾಡಲಾರಂಭಿಸಿದ್ದ ಶ್ರೀಮಂತಪ್ಪನ ಕಿವಿಗಳಿಗೆ ಉಘೇ ಉಘೇ ಬೇಕಿತ್ತು. ಭಜನಾ ಮಂಡಲಿ ಬೆಳೆಯಿತು.

ಮಗ ಬೆಳೆದಿದ್ದ. ಓದು ಹತ್ತಲಿಲ್ಲ. ಪಟಾಲಂ ಕಟ್ಟಿಕೊಂಡು ಅಪ್ಪನ ಹಣದಲ್ಲಿ ಮೋಜು ಮಸ್ತಿ ನಡೆಸಿದ್ದ ಅವನಿಗೆ ಒಂದು ನೆಲೆ ಕಲ್ಪಿಸುವ ಹೊಣೆ ಅಪ್ಪನಾಗಿ ಶ್ರೀಮಂತಪ್ಪನ ಮೇಲಿತ್ತು. ಏನು ಮಾಡಿದರೆ ಆತ ಉದ್ಧಾರವಾಗಬಹುದು.... ಹಗಲಿಡೀ ಮತ್ತು ರಾತ್ರಿ ಎಚ್ಚರವಾದಾಗೆಲ್ಲ ಯೋಚಿಸಿದ. ಅಪ್ಪನ ಕೆಲಸ ತಾನು ಮಾಡಲಾರೆ ಎಂದು ಮಗರಾಯ ತಾಯಿಯೊಂದಿಗೆ ಹೇಳಿಕೊಂಡಿದ್ದ. ಬೇರೆ ಏನಾದರೂ ನೋಡಿ ಎಂದು ಆಯಮ್ಮ ಗಂಡನಿಗೆ ದುಂಬಾಲು ಬೀಳುವಂತೆ ಮಾಡಿದ್ದ. ಸಿನಿಮಾ ತಯಾರು ಮಾಡೋಣ ಎಂದು ಪಕ್ಕದಲ್ಲೇ ಲೇಔಟ್ ಮಾಡಿರುವ ಗೌಡರು ರೊಕ್ಕ ಹಾಕಿ ಸಿನಿಮಾ ಮಾಡಿ ಹತ್ತು ಪಟ್ಟು ಕಮಾಯಿಸಿದ ಸುದ್ದಿಯನ್ನು ತಾಯಿಯ ಕಿವಿಗೆ ತುಂಬಿದ್ದ.

ಸಲಹಾ ಮಂಡಲಿಗೆ ಸುದ್ದಿ ಹೋಗಿತ್ತು. ''ಅಲ್ಲ ಶ್ರೀಮಂತಪ್ಪ , ನೀವು ಕಷ್ಟಪಟ್ಟು ಗಳಿಸಿದ ಹಣವನ್ನು ಅವರ್ನ ಇವರ್ನ ಹೀರೋ ಮಾಡಾಕೆ ಯಾಕೆ ಹಾಕಬೇಕು...? ನಿಮ್ಮ ಮಗನೇ ಇಲ್ವಾ, ರಾಜಕುಮಾರ... ರಾಜಕುಮಾರ ಇದ್ದಂಗವ್ನೆ... ಅವುನ್ನೇ ಹೀರೋ ಮಾಡ್ಬೌದಲ್ಲ..'' ಎಂಬ ಮಂಡಲಿಯ ಪುಂಗಿ ಗುರಿ ಮುಟ್ಟಿತು. ಶ್ರೀಮಂತಪ್ಪ ಒಂದು ದಿವಸ ಶುಭ ಮುಹೂರ್ತದಲ್ಲಿ ಪ್ರೊಡ್ಯೂಸರ್ ಆದ. ಮಗನನ್ನೇ ಹೀರೋ ಮಾಡಿ ಸಿನಿಮಾದ ಹೆಸರನ್ನೂ ದೊಡ್ಡ ಜಾಹೀರಾತಾಗಿ ಪ್ರಕಟಿಸಿದ. ಮರು ದಿವಸ ಸಿಟಿ ಮಾರ್ಕೆಟ್, ರಸೆಲ್ ಮಾರ್ಕೆಟ್ನಲ್ಲೆಲ್ಲ ಶ್ರೀಮಂತಪ್ಪನ ಮಾತೇ ಮಾತು. ''ಹೋಲ್‌ಸೇಲ್ ಶ್ರೀಮಂತಪ್ಪ, ನೀನು ಐನಾತಿ ಕಣಪ್ಪ'' ಎಂದು ಅವರೆಲ್ಲ ಹೊಗಳಿದಾಗ ಏಣಿ ಇಲ್ಲದೆಯೇ ಅಟ್ಟಕ್ಕೇರಿದ.

ಮತ್ತೊಂದು ಶುಭ ದಿವಸ ಚಿತ್ರ ಸೆಟ್ ಏರಿತು. ಕೆಂಪು ಬಣ್ಣದ ಪ್ಯಾಂಟು, ಕಡು ನೀಲಿ ಶರ್ಟ್ ಧರಿಸಿ, ಅರ್ಧ ಅಂಗುಲ ದಪ್ಪ ಬಣ್ಣ ಬಳಿದುಕೊಂಡ, ಕಡುಕಪ್ಪು ಕನ್ನಡಕಧಾರೀ ಮಗ ಕ್ಯಾಮೆರಾ ಎದುರಿಸಿದ್ದನ್ನು ಅಪ್ಪ ಅವ್ವ ಕಣ್ತುಂಬಿಕೊಂಡರು. ಹತ್ತು ದೇವರಿಗೆ ಹರಕೆ ಹೊತ್ತರು. ರಾಜಕುಮಾರ್ ಏರಿದ ಎತ್ತರಕ್ಕೆ ನಿಮ್ಮ ಮಗ ಏರುತ್ತಾನೆಂದು ಆಹ್ವಾನಿತರೆಲ್ಲ ಕೋರಸ್‌ನಲ್ಲಿ ಹೇಳಿದಾಗಲಂತೂ ಶ್ರೀಮಂತಪ್ಪನ ಅಂಗೈಗೆ ಸ್ವರ್ಗದ ತುಣುಕೊಂದು ಬಂದು ಬಿದ್ದಿತ್ತು.

ಶೂಟಿಂಗ್ ನಡೆಯುತ್ತಿತ್ತು. ಚಿತ್ರೀಕರಣವಾದ ಭಾಗದ ರಶಸ್‌ನ ನಿರ್ಮಾಪಕರಿಗೆ ತೋರಿಸಿ ಇನ್ನಷ್ಟು ಹಣ ಗಿಂಜುವ ತರಾತುರಿಯಲ್ಲಿದ್ದ ನಿರ್ದೇಶಕ ಅದಕ್ಕೆ ಏರ್ಪಾಡು ಮಾಡಿದ. ಮಗ, ಮಡದಿಯೊಂದಿಗೆ ನಿರ್ಮಾಪಕ ಸ್ಟುಡಿಯೋಗೆ ಚಿತ್ತೈಸಿದರು. ಐಷಾರಾಮಿ ಹೋಟೆಲಿನ ಸುಂದರ ಪರಿಸರದಲ್ಲಿ ನಾಯಕ- ನಾಯಕಿ ಕಾಫಿ ಹೀರುತ್ತ ಸರಸ ಸಲ್ಲಾಪದಲ್ಲಿರುವ ದೃಶ್ಯ. ನಾಯಕಿಯ ಹಿಂಭಾಗದಲ್ಲಿ ಚಂದ್ರ ಕಾಣಿಸುತ್ತಿದ್ದ. ಆ ಸಂಜೆ, ಏರುತ್ತಿರುವ ಚಂದ್ರ, ಆವರಣದ ಗಿಡಬಳ್ಳಿಗಳಿಗೆ ಹೊಂದಿಸಿದ ದೀಪಾಲಂಕಾರ.. ವಾಹ್ವಾ ಎನ್ನುವಂತಿತ್ತು. ನಿರ್ಮಾಪಕ ಖುಷ್ ಆದ.

ನಾಯಕಿಯೊಂದಿಗೆ ನಾಯಕ ಮಾತನಾಡುವ ದೃಶ್ಯ ನಂತರದ್ದು. ನಾಯಕನ ಹಿಂದೆ ಯಾವುದೋ ಚಿತ್ರ ಕಲಾಕೃತಿಯನ್ನು ಇಳಿ ಬಿಡಲಾಗಿತ್ತು. ನಾಯಕಿಯ ''ಹಿನ್ನೆಲೆ''ಗೆ ಹೋಲಿಸಿದರೆ ನಾಯಕನ ''ಹಿನ್ನೆಲೆ'' ಡಲ್ಲಾಗಿದೆ ಎನಿಸಿಬಿಟ್ಟಿತು ನಿರ್ಮಾಪಕರಿಗೆ. ತಮ್ಮ ಮಗನ ಹಿಂದೆಯೂ ಒಂದು ಚಂದ್ರನನ್ನು ಇಳಿಬಿಟ್ಟರೆ ಇನ್ನೂ ಸೊಗಸಾಗಿರುತ್ತದಲ್ಲ ಎಂಬ ಯೋಚನೆ ಬಂದಿದ್ದೇ ತಡ, ನಿರ್ದೇಶಕರನ್ನು ಕರೆದು ತಾಕೀತು ಮಾಡಿದರು. ಪರಸ್ಪ ರ ಎದುರುಬದುರು ಕುಳಿತಿರುವ ಇಬ್ಬರ ಹಿಂದೆಯೂ ಚಂದ್ರ ಹೇಗೆ ಇರಲು ಸಾಧ್ಯ ಎಂದು ಅಲ್ಲೇ ಇದ್ದ ಛಾಯಾಗ್ರಾಹಕ ಅಡ್ಡಬಾಯಿ ಹಾಕಿದ.

ನಿರ್ಮಾಪಕ ನಖಶಿಖಾಂತ ಉರಿದ. ಹಣ ಹಾಕುವವನು ನಾನೋ ನೀನೋ ಎಂದು ಎಗರಾಡಿದ. ಅದೂ ಹೆಂಡತಿಯ ಎದುರಲ್ಲೇ ತನ್ನ ಮಾತಿಗೆ ಎದುರಾಡಿದನಲ್ಲ ಎಂಬ ಸಿಟ್ಟಿನಲ್ಲಿ ಕೊತಕೊತ ಕುದ್ದು ಹೋದ. ನಿರ್ದೇಶಕನೂ ಏನೋ ಹೇಳಲು ಬಾಯಿ ಹಾಕಿದ. ರಾಜೀ ಸಂಧಾನವಾಗದೆ ಛಾಯಾಗ್ರಾಹಕ ತಂಡದಿಂದ ಹೊರಬಿದ್ದ. ಚಿತ್ರ ನಿರ್ಮಾಪಕ ಬಯಸಿದಂತೆಯೇ ಎರಡೆರಡು ಚಂದ್ರನಿಟ್ಟು ಚಿತ್ರ ನಿರ್ಮಾಣವಾಯಿತು. ಮುಂದೆ ಆ ಚಿತ್ರ ತೆರೆಗೆ ಬಂದಿದ್ದಾಗಲೀ ನಿರ್ಗಮಿಸಿದ್ದಾಗಲೀ ಗೊತ್ತಾಗಲಿಲ್ಲ.

***ಲೇಖಕರು ಹೆಸರಾಂತ ಪತ್ರಕರ್ತರು. ಈ ತಿಂಗಳಿನಿಂದ ಅವರ ಈ ಕಾಲಂ ಅಪರಂಜಿಯಲ್ಲಿ ಪ್ರಕಟವಾಗಲಿದೆ.***

**ನಮ್ಮ ಚಿತ್ರಗಳು ನಮಗೇನು ಕಲಿಸುತ್ತವೆ?**

1. ಅವಳಿ ಮಕ್ಕಳಲ್ಲಿ ಒಬ್ಬ ಯಾವಾಗಲೂ ಕ್ರಿಮಿನಲ್.
2. ಬಾಂಬ್ ನಿಷ್ಕ್ರಿಯಗೊಳಿಸುವಾಗ ಹೀರೊ ಯಾವ ವೈರ್ ಕತ್ತರಿಸಿದರೂ ಅದು ಸರಿಯಾದ ವೈರೇ ಆಗಿರುತ್ತದೆ.
3. ರೌಡಿಗಳ ಕೈಲಿ ಹೊಡೆಸಿಕೊಂಡಾಗ ನಮ್ಮ ಹೀರೋ ನೋವು ತೋರಿಸಿಕೊಳ್ಳುವುದೇ ಇಲ್ಲ ಆದರೆ ನಾಯಕಿ ಶುಶ್ರೂಷೆ ಮಾಡುವಾಗ ಮಾತ್ರ ಅಮ್ಮಾ.. ಎಂದು ನರಳುತ್ತಾನೆ.
4. ಪೊಲೀಸ್ ಸಿಐಡಿ ಸಸ್‌ಪೆಂಡ್ ಆದಮೇಲೆ ಮಾತ್ರ ಪ್ರಕರಣವನ್ನು ಬಿಡಿಸುತ್ತಾನೆ.
5. ಹೀರೊ ರಸ್ತೆಯ ಮೇಲೆ ಡಾನ್ಸ್ ಮಾಡಲು ಶುರುಮಾಡಿದಾಗ ಇದ್ದಬದ್ದ ಜನರೂ ಸಹ ಅವನೊಡನೆ ಸರಿಯಾಗಿಯೇ ಹೆಜ್ಜೆ ಹಾಕಲು ಕಲಿತಿರುತ್ತಾರೆ.